ಯಕ್ಷಗಾನ

ವಿಜಯ ನಗರ ಮಹಾತ್ಮೆ

[ಹೊಸ ಪ್ರಸಂಗ]

ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ. ನ. ಕೃ. ರವರ
ವಿಜಯ ವಿದ್ಯಾರಣ್ಯ ಕಾದಂಬರಿಯ ಆಧಾರದಿಂದ ಬರೆದುದು.

ಬರೆದವರು

'ಸತ್ಯವಾನ್'

ಸರ್ವಮಂಗಲಾ ಪ್ರಕಾಶನ

ಪೈವಳಿಕೆ.

ಬೆಲೆ: 60 ಪೈಸೆ. 1965

ಯಕ್ಷಗಾನ

— ವಿಜಯನಗರ ಮಹಾತ್ಮೆ —

(ಹೊಸ ಪ್ರಸಂಗ)

ಬರೆದವರು:

" ಸತ್ಯವಾನ್ "

ಮುದ್ರಕರು:

ಶ್ರೀ ಸತ್ಯಸಾಯಿ ಪ್ರೆಸ್,

ವಿಟ್ಲ.

ಪಾತ್ರ ಪರಿಚಯ

1. ದೇವೇಂದ್ರ.
2. ಮಹಾವಿಷ್ಣು.
3. ಧರ್ಮಪುರುಷ.
4. ಭಾರತಿ.
5. ಜಂಬುಕೇಶ್ವರರಾಯ.
6. ಹರಿಹರ. [ಹುಕ್ಕ.]
7. ಬುಕ್ಕ.
8. ವಿದ್ಯಾರಣ್ಯ ಯತಿಗಳು.
9. ದೇವರಾಯ.
10. ರಾಮರಾಯ.
11. ಮಹಮ್ಮದ್ ತೊಗಲಕ್.
12. ಇಬ್ರಾಹಿಂಖಾನ್.
13. ಜಮಾಲ.
14. ಬಹವುದ್ದೀನ್.
15. ಅಯೂಬಖಾನ್.
16. ಪದ್ಮಾವತಿ.
17. ಭುವನೇಶ್ವರಿ.
18. ಶ್ರೀಮತಿ.
19. ಮಾಧವ ಶರ್ಮ.
20. ಗಿರಿಜೆ.
21. ಜೀನತ್.

ವರ್ತಕ, ವರ್ತಕನ ಪತ್ನಿ, ಚಾರಕರು, ಗುರುಗಳು, ಯವನ ಮಂತ್ರಿಗಳು, ಸೈನಿಕರು, ಯವನ ಸ್ತ್ರೀಯರು, ಮುಂತಾದವರು.

ವಿ. ಸೂ:— ಈ ಪ್ರಸಂಗವನ್ನು ಅಭಿನಯಿಸುವ ಯಕ್ಷಗಾನ ಸಂಘದವರು ಲೇಖಕರ ಅನುಮತಿ ಪಡೆಯತಕ್ಕದ್ದು.

— ವಿಜ್ಞಾಪನೆ —

ಇದೊಂದು, ಯಕ್ಷಗಾನ ರಂಗಭೂಮಿಯಲ್ಲಿ ಪ್ರದರ್ಶಿಸಲು ಅನುಕೂಲವಾಗುವಂತೆ, ಐತಿಹಾಸಿಕ ಘಟನೆಯನ್ನೆತ್ತಿಕೊಂಡು ರಚಿತವಾಗಿರುವ ಯಕ್ಷಗಾನ ಪ್ರಸಂಗ.

ಹಿಂದುಗಳ ಸನಾತನ ಧರ್ಮದ ತಳಹದಿಯಲ್ಲಿ, ಮಹಾತ್ಮರಾದ ಶ್ರೀ ವಿದ್ಯಾರಣ್ಯಯತಿಗಳ ತಪೋಬಲ; — ಹರಿಹರ ಬುಕ್ಕನಾಯಕರ ದೇಹಬಲ ಇವುಗಳಿಂದ, ಕರ್ನಾಟಕದ ಇತಿಹಾಸದಲ್ಲಿ ಅಗ್ರ ಸ್ಥಾನ ಗಳಿಸಿದ ವಿಜಯನಗರವು ಹೇಗೆ ಸ್ಥಾಪಿಸಲ್ಪಟ್ಟಿತು, ಎಂಬುದೇ ಕಥಾವಸ್ತು.

ಯಕ್ಷಗಾನಕ್ಕೆ ಪೌರಾಣಿಕ ಕತೆಗಳು ಮಾತ್ರವೇ ವಸ್ತುಗಳಲ್ಲವೆಂಬುದನ್ನು ಹಲವು ಕವಿಗಳು ಈಗಾಗಲೇ ತೋರಿಸಿಕೊಟ್ಟಿರುವುದರಿಂದ ನನ್ನ ಪ್ರಯತ್ನವು ವ್ಯರ್ಥವೆಂದು ತಿರಸ್ಕೃತವಾಗದೆಂಬುದಾಗಿ ಭಾವಿಸುತ್ತೇನೆ.

ಯಕ್ಷಗಾನ ಕಲಾಸೇವಕರಾದ ನನ್ನ ಓರ್ವಮಿತ್ರರು, ನನ್ನಿಂದ ಬರೆಯಲ್ಪಟ್ಟ ಕತೆ, ಕಾದಂಬರಿಗಳನ್ನು ಓದಿ, — ನನ್ನಲ್ಲಿದ್ದ ಕಲಾಸೇವೆಯ ಉತ್ಸಾಹವನ್ನು ಸಹ ಅರಿತವರು, 'ನೀವು ಒಂದು ಯಕ್ಷಗಾನ ಪ್ರಸಂಗವನ್ನು ಏಕೆ ಬರೆಯುವುದಿಲ್ಲ?' — ಎಂದು ಆಗಾಗ ವಿಚಾರಿಸುತ್ತಿದ್ದರು. ಅವರ ಆ ಪ್ರೋತ್ಸಾಹವೇ ನನ್ನನ್ನು ಈ ಪ್ರಯತ್ನಕ್ಕೆ ತೊಡಗಲು ಪ್ರೇರೇಪಿಸಿದ ಪ್ರಥಮ ವಿಷಯ. ಅಂದಿನಿಂದ ನನ್ನ ಮನಸ್ಸು ಐತಿಹಾಸಿಕದೆಡೆಗೆ ತಿರುಗಿ 'ಯಾವುದನ್ನು ಆರಿಸಲಿ' ಎಂದು ಚಡಪಡಿಸ ತೊಡಗಿತು. ಆಗ ಶ್ರೀ ಅ. ನ. ಕೃರವರಿಂದ ವಿರಚಿತವಾದ ವಿಜಯ ನಗರ ಕಥಾಮಾಲೆಯಲ್ಲಿ 'ವಿಜಯ ವಿದ್ಯಾರಣ್ಯ' ಎಂಬ ಕಾದಂಬರಿಯನ್ನೋದುವ ಸದವಕಾಶವುಂಟಾಗಿ ಆ ಸನ್ನಿವೇಶಕ್ಕೆ ಮನಸ್ಸು ಮಾರುಹೋಯಿತು. ನವಸ್ಫೂರ್ತಿಯುಂಟಾಗಿ ಅಂದೇ ಬರೆಯುವ ಪ್ರಯತ್ನಕ್ಕೆ ಆರಂಭಿಸಿ, ದೈವಯೋಗದಿಂದ ಹತ್ತೇ ದಿನಗಳಲ್ಲಿ ಬರೆದು ಮುಗಿಸುವಂತಾಯಿತು. ಈ ಬಗ್ಗೆ ಶ್ರೀಮಾನ್ ಅ. ನ. ಕೃರವರಿಗೆ ಕೃತಜ್ಞತಾ ಪೂರ್ವಕ ಚಿರಋಣಿಯಾಗಿದ್ದೇನೆ.

ಪ್ರಸ್ತುತ ಈ ಪ್ರಸಂಗದ ವಿಷಯದಲ್ಲಿ, ಹಲವರಿಗೆ ಅತಿಶಯವೆಂದು ತೋರುವ ಒಂದೆರಡು ಪ್ರಕರಣಗಳ ಮಟ್ಟಿಗೆ, ನನ್ನ ಅಭಿಪ್ರಾಯವನ್ನು ವಿವರಿಸಬೇಕಾದುದು ಪ್ರಥಮ ಕರ್ತವ್ಯ. ಆರಂಭದಲ್ಲಿ ಬರುವ ದೇವೇಂದ್ರ, ಭಾರತಿ, ಧರ್ಮಪುರುಷ ಮತ್ತು ಶ್ರೀವಿಷ್ಣು – ಮುಂತಾದ ಪಾತ್ರ ನಿರೂ

ಪಣೆಯು ಕಥಾ ಕಾಲವನ್ನು ಮೀರಿದುದೆಂದೂ, ಕಲಿಯುಗ, ಅದರಲ್ಲೂ ಕ್ರಿ. ಶ. 1334ರ ಸುಮಾರಿಗೆ ಸಂಭವಿಸಿದ ಕಥಾನಕಕ್ಕೆ ಪೌರಾಣಿಕ ವ್ಯಕ್ತಿಗಳ ಜೋಡಣೆ ನಿಷಿದ್ಧವೆಂದೂ – ಹಲವರು ಅಭಿಪ್ರಾಯ ಪಡುವುದು ಸಹಜವೇ

ಮಹಾತ್ಮರಾದ ವಿದ್ಯಾರಣ್ಯರು ಭುವನೇಶ್ವರಿಯನ್ನು ಸಾಕ್ಷಾತ್ಕಾರ ಮಾಡಿಕೊಂಡು, ಕನಕವೃಷ್ಟಿಯಂಥಾ ಅದ್ಭುತ ಪವಾಡದಿಂದ ರಾಜ್ಯ ಸ್ಥಾಪಿಸಿದ್ದರೆಂಬುದು ಇತಿಹಾಸವನ್ನೋದುವ ಸರ್ವರಿಗೂ ತಿಳಿದ ವಿಚಾರ. ಶ್ರೀಶ್ರೀಯವರು ಪೂರ್ವವಾಸನೆಗೆ ಅನುಸಾರವಾಗಿಯೇ ದೈವೀಕ ಶಕ್ತಿಯ ಬೆಂಬಲ ಪಡೆದಿರುವುದು; – ವಿಜಯ ನಗರದ ಆಶ್ರಯದಿಂದ ಹಿಂದುಗಳು ಸನಾತನ ಧರ್ಮವನ್ನು ಕಾಯ್ದುಕೊಂಡುದು; ಎಲ್ಲವೂ ಭಗವದ್ ಸಂಕಲ್ಪದಿಂದಲೇ ನೆರವೇರಿದ ಅಘಟಿತ ಘಟನೆಗಳು ಎಂಬುದನ್ನು ಎತ್ತಿ ತೋರಿಸಿದಂತಾಗುತ್ತದೆ, ಎಂಬುದು ನನ್ನ ದೃಷ್ಟಿ. ಅಷ್ಟೇ ಅಲ್ಲ ಸಂಪೂರ್ಣಕಥೆಗೇ ದೈವಿಕ ಹಿನ್ನೆಲೆಯ ರಕ್ಷಾಕವಚವನ್ನು ತೊಡಿಸಿದಂತೆ ಸುಭದ್ರವಾಗುತ್ತದೆ, ಎಂಬುದರಿಂದ ಆಭಾಗವನ್ನು ಸೇರಿಸಿಕೊಳ್ಳಲಾಗಿದೆ.

ನಾಡಿನ ವಿದ್ವಜ್ಜನರ ದೃಷ್ಟಿಯಲ್ಲಿ ಇದು ಅವಸ್ಥಾನ ಪ್ರಸಂಗವೆಂದು ತೋರಿದಲ್ಲಿ –- ಮತ್ತು ಯಕ್ಷಗಾನ ಛಂದೋ ವಿಷಯದಲ್ಲಿ ಕಾಣುವ ನ್ಯೂನತೆಗಳಲ್ಲಿ – ನನ್ನನ್ನು ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಹಸ್ತಪ್ರತಿಯ ರೂಪದಲ್ಲಿದ್ದ ಕಥೆಯನ್ನು ಅಚ್ಚು ಹಾಕಿಸುವಷ್ಟರ ಚೈತನ್ಯವು ನನ್ನಲ್ಲಿಲ್ಲದಾಗ – ಇದನ್ನೋದಿದ್ದ ಹಲವು ಗೆಳೆಯರು ತಮ್ಮಿಂದಾಗುವ ಆರ್ಥಿಕ ಸಹಾಯವನ್ನಿತ್ತು ನೆರವಾದರು. ಅವರೆಲ್ಲರ ಉದಾರತೆಯ ಫಲವೇ ಇಂದು ಬೆಳಕು ಕಂಡ **'ವಿಜಯ ನಗರ ಮಹಾತ್ಮೆ!'**

ಇದೇ ರೀತಿ ವಿಜಯ ನಗರದ ಪತನದ ವರೆಗಿನ ಕಥಾನಕಗಳನ್ನು ಯಕ್ಷಗಾನ ರೂಪಕ್ಕೆ ಪರಿವರ್ತಿಸುವ ಸಾಹಸದಲ್ಲಿ ತೊಡಗಿರುವ ನನ್ನನ್ನು ಮಹಾ ಜನರ ಪ್ರೋತ್ಸಾಹವೇ ಆದರಿಸಬಹುದೆಂದು ನಿರ್ಭಯವಾಗಿ ನಂಬುತ್ತೇನೆ.

ಕೊನೆಯದಾಗಿ ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸತ್ಯಸಾಯಿ ಪ್ರೆಸ್‌ನವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನೂ ಸಲ್ಲಿಸಿರುತ್ತೇನೆ.

ಚೇವಾರು.
26—1—1965.

'ಸತ್ಯವಾನ್'
ಚೇವಾರು.

ಶ್ರೀ

ಯಕ್ಷಗಾನ

ವಿಜಯ ನಗರ ಮಹಾತ್ಮೆ

॥ ವೃತ್ತ ॥

ಶ್ರೀ ಕೃಷ್ಣಂ ಕರುಣಾಕರಂ । ಗೋವರ್ಧನೋದ್ಧಾರಣಂ ।
ನಾಕೇಶಾದ್ಯಮ ರಾಘವಂದಿತಪದಂ । ಗೋಪಾಂಗನಾ ಮೋಹಿತಂ ॥
ಆ ಕೈಟಭಾದಿ ರಜನೀಚರ ವಿನಾಶಕಂ । ಶ್ರೀ ಕಾಮನಯ್ಯಂ ಸದಾ ।
ಲೋಕೈಕ ನಾಥಂ ವಿಭುಂ ಸರ್ವ ಪಾಪ ಸಂ ॥ ಹಾರ ಶ್ರೀ ವಿಷ್ಣುಂಭಜೇ ॥

॥ ರಾ ॥ ಸೂ ॥ ಏಕತಾಳ ॥

ನಂಬಿದೆನ್ನೈಭವಾನೀ । ನಿನ್ನಯ ಚರ । ಣಾಂಬುಜಸರ್ಪವೇಣೀ ॥ ತುಂಬಿದ ಭಕ್ತಿಯೊಳನುದಿನ ನೆನವೆನು ॥ ನಂಬಿದವನ ಕಾಯೊ । ಕಂಬಾರ ದುರ್ಗೆಯೇ ॥ನಂಬಿದೆ ॥ ೧ ॥ ನಿತ್ಯವೆನ್ನಯಮನದೀ । ನಿನ್ನಯಪಾದ । ಸ್ತುತ್ಯವೃದ್ಧವಿಪಂದದೀ ॥ ಇತ್ತು ಜ್ಞಾನವ ದುಷ್ಟ । ಚಿತ್ತ ಬಾಧಿಸದಂತೆ ॥ ನಿತ್ಯ ಕಲ್ಯಾಣಿಸ । ರ್ವಾಣಿ ನೀಡಭಯವ ॥ ನಂಬಿದೆ ॥ ॥ ೨ ॥ ಬಾಲಕನಲ್ಲೊ ತಾಯೇ । ನಿನ್ನಯ ಘನ । ಲೀಲೆಯನೊಂದರಿಯೇ ॥ ನಾಲಗೆಯೊಳು ಬಂದ । ಓಲು ಭಜಿಸುತಿಹೆ ॥ ಮೇಲು ಕೀಳೆಂಬುವ । ಆಲಸ್ಯವಿಡದೆನ್ನ ॥ ನಂಬಿದೆ ॥ ೩ ॥

॥ ದ್ವಿಪದಿ ॥

ಕ್ಷೀರಾಬ್ಧಿವಾಸನಂಘ್ರಿಗಳನುರೆ ನೆನದೂ । ಪಾರಮಾರ್ಥದಿ ವಿಘ್ನರಾಜನಿಗೆ ಮಣಿದೂ ॥ ೧ ॥ ಭಾರತವ ಕಲಿಯುಗದಿ ಯವನರಾಕ್ರಮಿಸೀ । ಸೂರೆಗೊಂಡಾಳುತಿರೆ ನಾಡಹಿತ ಬಯಸೀ ॥ ೨ ॥ ಆ ತಪೋನಿಧಿಯು ವಿದ್ಯಾರಣ್ಯಭವೆಯಾ ॥ ಪ್ರೀತಿಯಿಂದೊಲಿಸಿ ಬರಿಸಿಯೆ ಕನಕ ಮಳೆಯಾ ॥ ೩ ॥ ನಿಜಭಕುತ ಹುಕ್ಕಬುಕ್ಕಾದಿನಾಯಕರಾ ॥ ಭುಜಬಲದಿ ನಿರ್ಮಿಸಿದಡವೆ ವಿಜಯನಗರಾ ॥ ೪ ॥ ಇತಿಹಾಸ ಚರಿತೆಯಿದ ಯಕ್ಷಗಾನದಲೀ ॥ ಕ್ಷಿತಿಜನತೆಗೊಪ್ಪಿಸಿದೆನೀ ವಿಧಾನದಲೀ ॥ ೫ ॥ ಕೊರತೆಗಳ ಮನ್ನಿಸುತ ವಿದ್ವಾಂಸರೆನ್ನಾ ॥ ತರಳಬುದ್ಧಿಗೆ ನೀಡಿ ಪ್ರೋತ್ಸಾಹವನ್ನಾ ॥ ೬ ॥ ಕನ್ನಡದ ಪ್ರಾಚೀನ ಕಲೆಯ ಸೇವೆಯನೂ ॥ ಎನ್ನೊಳೀಕ್ಷಿಪುದೆನು, ತಲೆರಗಿ ಬೇಡುವೆನೂ ॥ ೭ ॥

॥ ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥

ವರವೆ ನಾ ಕಲಿಯುಗದೊಳೊಂದಿನ । ಸುರಪನಮರಾವತಿಯೊಳೋಲಗ॥ ವೆರಸಿ ಕುಳಿತಿರೆ ದಿಕ್ಪತಿಗಳೊಡ। ನೊರೆದನಾಗಾ ॥ ೧ ॥ ಕೇಳಿ ತ್ರಿದಶರು ಗತಯುಗದಿ ಸಿರಿ । ಲೋಲ ಧರ್ಮೋದ್ಧಾರವೆಸಗಲು ॥ ತಾಳಿಯವತಾರಗಳ। ನಿಳೆಯನು। ಪಾಲಿಸಿದನೂ ॥ ೨ ॥ ಯುಗದ ಮಹಿಮೆಯನಳವಡಿಸಿ ಕಲಿ । ಯುಗದೊಳಗಣಿತ ಧರ್ಮ ಪುರುಷರ ॥ ನಗಧರನು ಮತ್ಕಾರ್ಯಕಿಳುಹಲು । ಜಗತಿಯೊಳಗೇ ॥ ೩ ॥ ಭಕ್ತರಾಚಾರ್ಯಾದಿಗಳ ಪರ। ಸೂಕ್ತಿಮಿಗೆ ಪರಮಾರ್ಥಜ್ಞಾನಾ ॥ ಸಕ್ತಿ ತಪ್ಪಿದ ಫಲದಿ ಜನರೊಳು। ಶಕ್ತಿಯಳಿದೂ ॥ ೪ ॥ ತ್ಯಾಗ ಬುದ್ಧಿಯನುಳಿದು ಸರ್ವರು । ರಾಗ ದ್ವೇಷಾದಿಗಳ ಪ್ರೇಮಿಸಿ ॥ ಯಾಗಜಪ ತಪವಳಿದು ಹಗೆತನ। ಸಾಗುತಿಹುದೂ ॥ ೫ ॥

॥ ಭಾಮಿನಿ ॥

ಎಂದು ಸುರಪಾಲಕನು ತ್ರಿದಶರ। ವೃಂದದೊಡನಾಮರ್ತ್ಯಲೋಕದ। ಅಂಧತನಗಳನರುಹುತಿರಲು ಸುಧರ್ಮ ಸಭೆಯೆಡೆಗೇ ॥ ಹಿಂದು ಧರ್ಮಭಿಮಾನಿ ಪುರುಷನು। ಬಂದು ಭಾರತಿ ಸಹಿತ ವಂದಿಸೆ! ಕಂದಿದಾನನ ಕಾಂತಿಯಿಂದಿರೆ ಕೇಳ್ದನಮರಪತೀ ॥ ೧ ॥

॥ ರಾಗ । ಕಾಂಭೋಧಿ । ಜಂಪೆ ॥

ಏನು ಬಂದಿಹೆ ಧರ್ಮ। ಪುರುಷ ಭಾರತಿ ಸಹಿತಿ। ದೇನು ವದನದ ಕಾಂತಿ। ಹೀನವಾಗಿಹುದೂ ॥ ಮಾನವಂತನೆ ಹಿಂದೂ। ಸ್ಥಾನದ ವಿಶೇಷಗಳ। ದೇನು ತನ್ನೊಡನುಸುರು। ಕ್ಷೋಣಿಯ ವಿಚಾರಾ ॥ ಏನು ॥ ೧ ॥ ಸುರಪಾಲ ಮರ್ತ್ಯಲೋಕದೊಳಿಲ್ಲ ಎನ್ನನಾ। ಧರಿಪವರು ಹಿರಿತನದ। ಗರುವದುಲ್ಬಣದೀ ॥ ಪರಮತಾಂಧರು ನೆರೆದು। ತರಹರಿಸುವಂತಾಯ್ತು ॥ ನೆರೆ ಸತ್ವಹೀನನಹೆ। ಪರಮ ಭಾರತದೀ ॥ ಏನು ॥ ೨ ॥ ಭಾರತಿಯು ಪೇಳಿದಳು। ಕ್ರೂರ ಯವನರವಶದಿಸೇರಿದೆನ್ನಯ ಬವಣೆ। ಯಾರಿಗರುಹುವೆನೂ ॥ ನಾರಿ ಪುರುಷರ ವಧೆಯು ಸೂರೆ ದೇವಾಲಯವ। ಪಾರಗೋವಿಪ್ರಸಂ । ಹಾರ ವರ್ದಿಸಿತೂ ॥ ೩ ॥ ದುಗುಡದೊಳಗೆಂದ ಕಲಿ। ಯುಗದ ಪ್ರಾಬಲ್ಯವಿದ । ಬಗೆಹರಿಸುವವರಿಲ್ಲ। ನಗಧರನ ಹೊರತೂ ॥ ಜಗದಾದಿದೇವನನು। ಮಿಗೆ ಪ್ರಾರ್ಥಿಸುವದೆನಲು। ಅಗಣಿತದ ಭಕ್ತಿಯೊಳು। ಮುಗಿದು ಕೈಗಳನೂ ॥ ೪ ॥

॥ ವಾರ್ಧಿಕ ॥

ಜಯ ಜಯ ರಮಾಲೋಲ ಭಕ್ತಜನ ಪರಿಪಾಲ । ಜಯತು ವೇದೋದ್ಧರಣ ಕ್ಷೀರಸಾಗರ ಶಯನ । ಜಯತು ನಿಗಮಾಗಮ ಸ್ತೋತ್ರ ಮೈದೋರು ಶ್ರೀ । ಯರಸ ವಿವಿಧಾವತಾರಾ ॥ ಭಯಭೀತರನು ಹಿಂದೆ ನೀನೆ ಪೊರೆದಾತ ಶ್ರೀ । ಹಯವದನ ಸಾಕ್ಷಾತ್ ಸ್ವರೂಪದಿಂ ದರುಶನದಿ । ಭಯ ನಿವಾರಿಪುದೆನಲು ಮೈದೋರಿ ಲಕ್ಷ್ಮೀನಿವಾಸ ಸಂತೈಸುತೆಂದಾ ॥ ೧ ॥

॥ ರಾಗ । ಸಾರಂಗ ॥ ಅಷ್ಟ ॥

ಹೇ ದಿವಿಜೇಂದ್ರ ನೀನೂ । ಭಾರತಿ ಸಹಿ । ಶೀಧರ್ಮ ಪುರುಷನನೂ ॥ ಮೋದದೊಳೊಡಗೊಂಡು । ಈ ವಿಧ ನುತಿಸಲು ॥ ಬಾಧೆಯಾರಿಂದಾಯ್ತು । ಸಾದರದಲಿ ಪೇಳು ॥ ಹೇ ದಿವಿ ॥ ೧ ॥ ದೇವ ಭೂತಳದೊಳಿಂದೂ । ಮ್ಲೇಂಛರು ಹಬ್ಬಿ । ಹಾವಳಿ ಹೆಚ್ಚಿತೆಂದೂ ॥ ದೇವ ಮಂದಿರ ನಾಶ । ಗೋವಿಪ್ರವಧೆಗಳಿಂ ॥ ಪಾವನ ಹಿಂದುಗಳ್ । ಜೀವಿಸಲೆಡೆಯಿಲ್ಲ ॥ ದೇವ ॥ ೨ ॥ ಹಿಂದು ಧರ್ಮಿಯರಿಗೇ । ರಾಜ್ಯದೊಳು ನಿ । ರ್ಬಂಧ ಧರ್ಮಾಚಾರಕೇ ॥ ಹಿಂದು ರಾಜರಿಗೆಲ್ಲ । ದ್ವಂದಕಲಹವಿಕ್ಕಿ ॥ ಹಿಂದುಸ್ಥಾನವ ರಕ್ತ । ದಿಂದ ತುಂಬಿದರೆಲ್ಲ ॥ ದೇವ ॥ ೩ ॥ ಪೋಷಿಪ ದೈವ ನೀನೂ । ಯವನ ಜನ । ದಾಸ್ಯದಿಂ ನೊಂದೆ ನಾನೂ ॥ ಹೇ ಸರ್ವೇಶನೆ ಹಿಂದೂ । ನಾಶವನುರೆಕಂಡು ॥ ಘಾಸಿಯಾಗಿಹೆಮನ । ದಾಶೆಯ ಸಲಿಸೆನ್ನ ॥ ದೇವ ॥ ೪ ॥

॥ ವಾರ್ಧಿಕ ॥

ಲೀಲೆಯಿಂ ಸುರಪ ಭಾರತಿ ಧರ್ಮ ಪುರುಷರಿದ । ರಾಲಿಪುದು ಜನರು ಕಲಿಯುಗ ವಿಲಾಸಕ್ಕೊಲಿದು । ಹಾಳಾಯ್ತು ಜಗವು ಕರ್ತವ್ಯಚ್ಯುತಿಯಿಂದ ಪರಮಾರ್ಥ ಹೊಣೆ ಏನೆಂಬುದಾ ॥ ಆಲೋಚಿಸದೆ ಧರ್ಮಶ್ರದ್ಧೆಯನು ಬಿಟ್ಟು ತಪ । ಪಾಲಿಸದೆ ರಾಷ್ಟ್ರದುನ್ನತಿಗೆ ತ್ಯಾಗವ ಬಿಟ್ಟು । ಕೀಳು ಅಧಿಕಾರ ಲಾಲಸೆಯಿಂದ ಆತ್ಮಾಭಿಮಾನದಿಂ ನಲಿದ ಫಲವೂ ॥ ೧ ॥

ಬಿದರದಿರಿ ಮುಂದೆ ಪಂಪಾಕ್ಷೇತ್ರದೊಳು ಚಲ್ವ । ಬುಧಮಾಯಣನ ಧರ್ಮಪತ್ನಿ ಶ್ರೀಮತಿ ದೇವಿ । ಯುದರ ಸಂಜಾತ ಮಾಧವ ಶರ್ಮ ಸಂಸಾರ ತ್ಯಾಗಿಯೆಂದೆನಿಸಿ ತಪದಾ ॥ ಅದುಭುತದ ಶಕ್ತಿಯಿಂ ಬಲಿಯಿತ್ತ ಸತ್ಫಲದಿ । ಉದುಭವಿಸಿ ಕರ್ನಾಟಕ ಸ್ವತಂತ್ರ ಸ್ವರಾಜ್ಯ । ವದರಿನಿಂ ಹಿಂದೂ

ಸನಾತನ ಧರ್ಮ ಕಲ್ಯಾಣವಹುದೆನುತ ಮರೆಯಾಗಲೂ ॥ ೨ ॥

॥ ಕಂದ ಪದ್ಯ ॥

ಬಳಿಕಾ ಸುರಪತಿಯನು ಬೀ। ಳ್ಗೊಳುತಾ ಭಾರತಿ ಧರ್ಮ ಪುರುಷರೀರ್ವರುತಾ ॥ ಸಲೆಭೂಲೋಕಕೆ ತೆರಳಲು। ವಲಿದಾಲಿಪುದಿತ್ತ ಮುಂದಿನ ಕಥೆಯಂ ॥ ೧ ॥

॥ ವಾರ್ಧಿಕ ॥

ಚಿತ್ತಾವಧಾನದಿಂದಾಲಿಪುದು ಭಾರತದ। ಉತ್ತರವ ಯವನ ಜನರಾಕ್ರಮಿಸಿ ಚಕ್ರಾಧಿ। ಪತ್ಯವಂ ವಿಸ್ತರಿಸುವಾತುರದೊಳಿರಲತ್ತ ಆನೆಗೊಂದಿ ಪ್ರದೇಶವಾ ॥ ಉತ್ತಮದ ಸಾಮ್ರಾಜ್ಯವಂ ಜಂಬೂಕೇಶ್ವರನು। ಸತ್ವನಿಧಿ ಬಲ್ಲಾಳಸಾಮಂತ ಕುಲಜನವ। ಶತ್ರುಪೀಡೆಯ ಗಣಿಸದಾಳುತಿಹ ಹಿಂದು ಕುಲ ಸತ್ವ ಪ್ರತೀಕನೆನಿಸೀ ॥ ೧ ॥

॥ ಭಾಮಿನಿ ॥

ಧರಣಿಪತಿಯೊಂದಿವಸ ತನ್ನಯ। ಪರಿಜನರು ಸಾಮಂತರೊಗ್ಗಿಲಿ ಮೆರೆವ ಸಿಂಹಾಸನದೊಳೊಪ್ಪಿರೆ। ನೋಡುತೆಡ ಬಲವಾ ॥ ನೆರದ ಹರಿಹರ। ಬುಕ್ಕ ಜಗಪತಿ। ಪುರದ ಶ್ರೇಯೋಕಾಂಕ್ಷಿತರ ಸ। ತ್ಕರಿಸಿ ರಾಜ್ಯಭವಿಷ್ಯವನು ನೆನೆದವರೊಳಿಂತೆಂದಾ ॥ ೧ ॥

॥ ರಾಗ। ಕಾಂಬೋಧಿ ॥ ಜಂಪೆ ॥

ಕೇಳಿರೈ ಸಾಮ್ರಾಜ್ಯ। ದೇಳಿಗೆಗೆ ಮೂಲವಹ। ಶೀಲನಿಧಿಗಳಿರ ನಿಮಗೊರವೇ ॥ ಆಳಿದೆವು ಧರ್ಮದಿಂದೀ ವರೆಗೆ ಯವನಕುಲ। ಧಾಳಿಗಂಜದೆ ಧೈರ್ಯದಿಂದಾ ॥ ಕೇಳಿರೈ ॥ ೧ ॥ ಚಂದ್ರಪುರದರಸುಗಳು। ಮೆರದ ಗಜಪುರ ಡಿಲ್ಲಿ ॥ ಇಂದು ಸುಲ್ತಾನ ಮುಹಮ್ಮದನಾ ॥ ಬಂಧನದೊಳಿರೆ ದೇಶ। ದಾಹದೊಳು ಘುರಗೈಯ್ಯೆ। ಎಂದಿಗಿಲ್ಲಿಗೆ ಬರುವನರಿಯೇ ॥ ಕೇಳಿರೈ ॥ ೨ ॥ ಸಾಮಂತರಾಗದೊಡೆ। ಕ್ಷೇಮವಲ್ಲೆಂದು ಸಂ। ಗ್ರಾಮ ಭಯ ತೋರ್ಪ। ಯವನರೊಳೂ ॥ ಸಾಮ್ರಾಜ್ಯಹಿತಕೆ ನಮ। ಗ್ಯಾವ ಪಥವೆನಲು ಜನಸ್ತೋಮದಿಂ ಹರಿಹರನು ನುಡಿದಾ ॥ ಕೇಳಿರೈ ॥ ೩ ॥

॥ ರಾ। ಸೌ। ತ್ರಿವುಡೆ ॥

ಧರಣಿಪತಿ ಚಿತ್ತೈಸು ದೇಹದಿ। ಹರಿಯುತಿರೆ ಹಿಂದೂ ರುಧಿರಕಣ। ನೆರೆಮುತಾಂಧರನಾಶ್ರಯಿಸಿ ಬಾ। ಳಿರುವುದುಂಟೇ ॥ ೧ ॥ ಪುಣ್ಯ ಭಾರತ

ಹಿಂದು ಧರ್ಮದಿ। ಮಣ್ಣನೆರಚೀರ್ದವರ ನಾಶಕೆ॥ ಸನ್ನಿಹಿತರಾಗಿಹುದು ಯೋಗ್ಯವಿ। ದೆನ್ನಲಾಗಾ ॥ ೨ ॥ ಹುಕ್ಮನೆಂದನು ಶಾಂತಿ ಬಯಸಿದ। ಚಿಕ್ಕ ಪಾಳೆಯಗಾರ ವರ್ಗವ। ತಿಕ್ಕಿ ಸುಲಭದೊಳಾಮುಹಮ್ಮದ। ಸೊಕ್ಕಿರುವನೂ ॥ ೩ ॥ ಧೀರನವ ಜಗಪತಿಯೊರದ ಕೈ। ಚಾರಿರುವ ದುರ್ಗಗಳ ಹಿಂದಕೆ॥ ಸೇರಿಸುವದೀ ಸಮರವೊಂದೇ। ದಾರಿ ನಮಗೇ ॥ ೪ ॥ ಸಿದ್ಧತೆಯೊಳಾವಿಹುದಿದೇ ಕಡೆ। ಯುದ್ಧವೆನಿಸಲಿ ಯವನ ಮಾರಣ। ಕಧ್ವರಕೆ ನಾವಿಹುದು ದೀಕ್ಷಾ। ಬದ್ಧರಾಗೀ ॥ ೫ ॥

॥ ರಾಗ । ಕೇತಾರಗೌಳ । ಅಷ್ಟ ॥

ವೀರರೀ ತೆರದ ಗಂ। ಭೀರದೊಳೀರ್ದಡೆ। ಬಾರದು ಭಯ ನಮಗೇ। ಜೀರೊಂದು ಚಿಂತೆ ಎ। ನ್ನೊಡಲನ್ನು ಸುಡುತಿದೆ। ಧಾರುಣಿಯೊಡನಾಳಲೂ ॥ ೧ ॥ ಪುತ್ರಿಯಲ್ಲದೆ ವೀರ। ಪುತ್ರರಿಲ್ಲದರಿಂದ। ಮತ್ತ ಕಾತಿಸಿಯಳನೂ ॥ ಉತ್ತಮಗಿತ್ತು ವೈ। ವಾಹಗೈದಿಳೆಯನ್ನು। ಇತ್ತು ಸಂತಸವ ಗೊಂಬೆ ॥ ೨ ॥ ಎನ್ನ ಮೇಲಣ ಸ್ವಾಮಿ। ನಿಷ್ಠೆ ಗೌರವವನ್ನು। ಕನ್ಯೆಯೊಳಿರಿಸಿ ಮುಂದೇ॥ ಹೆಣ್ಣಂಬ ತಾತ್ಸಾರವಿಡದೆ ಕಾಯುವುದೆಂದು। ಕಣ್ಣ ನೀರನು ತುಂಬಿದಾ॥ ೩ ॥

॥ ಕಂದ ಪದ್ಯ ॥

ಎಂದಾರಾಯನ ಮಾತಿಗೆ। ಒಂದಾಡದೆ ಸಭೆ ನಿಂದಿರ್ದಾಗಳ್ ॥ ಬಂದಳು ಸುತೆ ಪದ್ಮಾವತಿ। ತಂದೆಗೆ ವಂದಿಸುತೆಂದಳು ಮನದಿರವಂ ॥ ೧ ॥

॥ ರಾಗ । ನೀಲಾಂಬರಿ । ರೂಪಕ ॥

ಜನಕನೆ ನೀ ಕೇಳೆನ್ನಯ। ಮನದಂತರ್ಯದ ನೀ ಸಭೆ॥ ಘನ ಪ್ರಾಜ್ಞರೊಳು ನಿವೇದಿಸ। ಲೆನುತಲಿ ಬಂದಿಹೆನೂ ॥ ೧ ॥ ದೋಸದ ಯವನರ ಹಿಂಸೆಗೆ। ಕ್ಲೇಶವು ಹಬ್ಬಿರಲಿಮ್ಮ ಸಂ। ತೋಷ ವಿಲಾಸದ ಚಿಂತಿಪ। ದೀ ಸಮಯದೊಳೇಕೆ ॥ ಭಾಷೆಯ ಗೈವಿಹೆ ನವಿಲ್ಕ್ರ। ದೇಶದಿ ಯವನರ ದರ್ಪದಿ। ನಾಶವ ಪಡೆಯದೆ ಪರಿಣಯ। ದಾಶೆಯು ಎನಗಿಲ್ಲಾ ॥ ೨ ॥ ವನಿತೆಯರೆಲ್ಲರ ನೆರಹಿಸಿ। ವನಿತಾದಳವನು ನಿರ್ಮಿಸಿ। ರಣವಿದ್ಯೆಯ ಶಿಕ್ಷಣದೊಳು। ಅನುಗೊಳಿಸುತಲವರಾ॥ ವನಿತಾ ಭಾಗದ ಕರ್ತೃ। ತ್ವವನು ಸ್ವರಾಜ್ಯದ ಸೇವೆಗೆ। ವಿನಿಯೋಗಿಸೆ ನಿರ್ಧರಿಸಿಹೆ। ಅನುಮಾನವಿದಲ್ಲಾ ॥ ೩ ॥

॥ ವಾರ್ಧಿಕ ॥

ಅರಸ ಕೇಳ್ ಬಳಿಕ ಪದ್ಮಾವತಿಯ ನೇಮದಿಂ। ಗಿರಿಜೆ ಡಂಗುರವ ಸಾರಿದಳು ವೃದ್ಧರನುಳಿದ। ತರುಣಿಯರು ಬಂದು ವನಿತಾ ದಳವ ಸೇರುವುದು। ರಾಷ್ಟ್ರ ಕೀರ್ತಿಯನುಳಿಸಲೂ॥ ನೆರೆದರು ಸಹಸ್ರ ಸಂಖ್ಯೆಯ ತರುಣಿಯರು ತಮ್ಮ ಕರದಿ ಶಸ್ತ್ರಾಸ್ತ್ರಗಳ ಧರಿಸಿಯಂತಃಪುರದ । ಹೊರವಳಯದುಪವನ ದೊಳಾರಂಭವಾಯ್ತು ಗರಡಿಯ ಪಾಠ ಧನುರ್ವಿದ್ಯೆಯೂ ॥ ೧ ॥

ರಾಗ । ನಾ. ನಾ. ಅಷ್ಟ ತಾಳ.

ಊರ ಮಾರಿಯ ಬಡಿದಟ್ಟಲೂ । ಸೇನೆ । ಸೇರುತಲಿಹ ವಾರ್ತೆ ಹಬ್ಬಲೂ ॥ ದೂರ ದೇಶದ ಶಶಿಮುಖಿಯರೂ । ಬಂದು । ಧಾರುಣೀಶನ ಸುತೆಗೆರಗಲೂ ॥ ೧ ॥ ಹಳ್ಳಿಯ ಮನೆ ಮನೆ ಹೆಣ್ಗಳೂ । ಹೊಲ । ದಲ್ಲಿ ಗೇಯುವ ಕೂಲಿಯಾಳ್ಗಳೂ ॥ ನಿಲ್ಲದೆ ಹೊರಟರುತ್ಸಾಹದೀ । ತಮ್ಮ ವಲ್ಲಭ ರಾಜ್ಞನು ಸಾರದೀ ॥ ೨ ॥ ಅತ್ತೆಮಾವಂದಿರ ಗೊಡವೆಯಾ । ತಾಲಿ । ಸುತ್ತಿದವನ ನಿತ್ಯ ಸೇವೆಯಾ ॥ ಹೆತ್ತ ಬಾಲರನೋಳ್ಪರಿಲ್ಲದೇ । ಚಿಂತೆ । ಹತ್ತಿ ಗೃಹದಿ ಸ್ತ್ರೀಯರಿಲ್ಲದೇ ॥ ೩ ॥ ಹೆಂಡಂದಿರೀ ಕೃತ್ಯದಿಂದಲೀ । ಗೌಡ ಗಂಡು ಗಳೆಲ್ಲ ಚಿಂತಿಸುತಲೀ ॥ ಭಂಡರಂದದಿ ಗೃಹಕೃತ್ಯವಾ । ಮುದ । ಗೊಂಡು ನಿರ್ವಹಿಸುತ್ತೆ ನಿತ್ಯವಾ ॥ ೪ ॥

॥ ರಾಗ । ಭೈರವಿ । ಝಂಪೆ ॥

ಇತ್ತ ಡಿಲ್ಲಿಯೊಳು ಮಹ । ಮ್ಮದ ತೊಗಲಕನು ತೋಷ । ವೆತ್ತು ತಾನಿರ್ದ ಪೊಸ । ಮೃತ್ಯುವಿನ ತೆರದೀ ॥ ೧ ॥ ಬಾದಶಹ ನೆನಸಿ ಮೆರೆ । ವಾದುರಾಶೆಯೊಳವನು ॥ ಕಾದಿ ಸೋದರನ ಶಿರ । ಭೇಧಿಸುತ ಲಂದೂ ॥ ೨ ॥ ಆತನಾಳ್ವಿಕೆಯಲ್ಲಿ । ಭೀತಿಯೊಂದಲ್ಲದೆಯೆ ॥ ಭೂತದಯೆ ಕ್ಷಮೆನ್ಯಾಯ । ನೀತಿಯೊಂದಿಲ್ಲಾ ॥ ೩ ॥ ಪರದೇಶ ದಾಹದಿಂ । ಪರಮತ ನಿಪಾತದಲಿ ॥ ಹಿರಿಯ ಗುರಿ ಜೀವನದ ಪುರುಷಾರ್ಥವೆಂದೂ ॥ ೪ ॥ ಮಾನವತೆಯನ್ನುಳಿದ । ದಾನವರ ತೆರನಂತೆ ॥ ಹೀನ ಹಿಂಸಾಕೃತ್ಯ । ತಾನೆಸಗುತಿಹನೂ ॥ ೫ ॥

॥ ಭಾಮಿನಿ ॥

ಕರೆಸಿದನು ಸಭೆಗೊಂದು ದಿನ ಮೊರೆ । ಯುರು ಮತಾಂಧ ಪ್ರಮುಖ ರೆನಿಸಿದ । ಗುರುವು, ಸೇನಾಧ್ಯಕ್ಷ ಮೇಜ್ ವಜೀರ ಮುಖ್ಯರನೂ ॥ ವರೆಯ

ಲೇನಾ ಸಭೆಯು ಸಾಕ್ಷಾತ್ | ದುರುಳ ಮಂಡಲದಂತೆಸೆಸೆಯೆ ವಿ | ಷ್ಮರವ
ನೇರಿ ಕಠೋರ ಸ್ವರದೊಳಗೆಂದನವರೊಡನೇ ॥ ೧ ॥

ರಾ | ಸೌರಾಷ್ಟ್ರ ತ್ರಿವುಡೆ ॥

ಕೇಳಿ ತೊಗಲಕ ಕುಲದ ಭಾಗ್ಯದ | ಬಾಲರವಿ ಬೇಸುತಿದೆ ಹಿಂದೂ | ಜಾಲ ಹರಿಹಂಚಾದುದೆಮ್ಮಯ | ತೋಳ ಬಲದೀ ॥ ೧ ॥ ಪ್ರತಿಭಟಿಸುವವರಿಲ್ಲ ಮುಂದಕೆ | ಪಿತರು ಸೇವಾಗಿರಲು ನಮ್ಮಯ | ಮತ ಪ್ರಚಾರಕೆ ತೊಡಗುವುದು ಪರ | ಮತವ ಬಡಿದೂ ॥ ೨ ॥ ಹಿಂದುಗಳ ಗುಡಿ ಗೋಪುರಂಗಳ | ವಂದನುಳಿಸದೆ ಬಳಿಕವರ ಸತಿ | ವೃಂದವನ್ನು ಜನಾನದೊಳಗಿಡೆ | ಹಿಂದುಳಿಯದಿರೀ ॥ ೩ ॥ ನೀತಿಯಿಂದಲಿ, ಬಳಿಕ ದರ್ಪದ | ಭೀತಿಯಿಂದಲಿ, ಭ್ರಷ್ಟರಾಗುವ | ರೀತಿಗೈವುದು ಸಕಲ ಹಿಂದೂ | ಜಾತಿಯರಸೂ ॥ ೪ ॥ ರಕ್ತ ಹರಿದಡೆ ಮಹಮ್ಮದೀಯರ ಶಕ್ತಿ ಮೆರೆವುದು ನಮ್ಮ ಶಾಸನ | ವ್ಯರ್ಥವಾಗದ ತೆರದೊಳೆಲ್ಲ ಪ್ರ | ಯತ್ನಿಸುವುದೂ ॥ ೫ ॥

॥ ರಾಗ | ಕೇತಾರ ॥ ಅಷ್ಟ ॥

ಎನಲು ಖಾಜಿಗಳು ಮಂತ್ರಿಗಳೆದ್ದು ಕೇವಿಯಿಂ | ಮಣಿದೆಂದರೀ ವರೆಗೇ ॥ ಜನಪ ಸಮ್ರಾಜ್ಞೆಯನುಳಿದು ಬಾಳಿದರ ಕಾ | ಣೆಸು ನಮ್ಮ ಸಾಮ್ರಾಜ್ಯದೀ ॥ ೧ ॥ ಇಳ್ಟಂಗೆ ಮನ್ನಣೆ ಕೊಡದವನನು ಹಸ್ತಿ ಕಾಲಿಂದ ತುಳಿಸಿದೆವೂ ॥ ಹಾಳು ಬುದ್ಧಿಗೆ ಮನವಿಟ್ಟ ದ್ರೋಹಿಗಳನ್ನು | ಶೂಲಕೇರಿಸುತಿಹೆವೂ ॥ ೨ ॥ ಪುಟ್ಟಿದ ಸುತೆಯನ್ನು | ಕೊಟ್ಟು ಕಾಲ್ಗೆರಗದ ಕೆಟ್ಟ ಕಾಫರನಾತನಾ ॥ ಕಟ್ಟಿ ಕೈಕಾಲ್ಗಳ ಬೆಟ್ಟದಿಂದುರುಳಿಸಿ | ಇಷ್ಟವ ಪಡೆದಿಹೆವೂ ॥ ೩ ॥ ಹೆಣ್ಗಳ ಕಂಡು ಕಣ್ಣಿಸ್ನೆಗೈಯ್ಯದ ಜನ | ಕಣ್ಣ ಕೀಳಿಸಿಕೊಂಡರೂ ॥ ವನ್ಯ ಮೃಗದ ಬಾಯ್ಗೆ ಬಲಿಯಾದರಯ್ಯ ದಾ | ಕ್ಷಿಣ್ಯವ ತೋರ್ದವರೂ ॥ ೪ ॥ ಪೇಳಲೇನ್ ತಲೆಕೂಲಿ | ನೆವನ ಪೇಳ್ದವರನ್ನು ಹಾಳು ತಲೆಯ ಖಂಡಿಸೀ ॥ ಕಾಲು ನೋವೆಂದರ | ಕಾಲ ಕಡಿದು ಕುಂಟು | ಗಾಲಿಸಿಂ ನಡೆವಂದದೀ ॥ ೫ ॥ ಸುಳ್ಳಾಡಿದವರ ನಾಲಿಗೆಯ ಖಂಡಿಸಿ ಮತ್ತೇ ಹಲ್ಲು ನೋವೆಂದವನಾ ॥ ಹಲ್ಲು ಕೀಳಿಸಿ ಬಾಯ್ಗೆ | ಹುಲ್ಲು ತುಂಬಿಸಿ ರಾಜ್ಯ | ವೆಲ್ಲವ ತಿರುಗಿಸುತಾ ॥ ೬ ॥ ಹೇಮದ ಮೊಹರಿನ ಬದಲು ಸಾಮ್ರಾಜ್ಯದಿ | ತಾಮ್ರದ ನಾಣ್ಯವಾಯ್ತು ॥ ಹೇಮಹೀನನೆ ಭಾಗ್ಯ ವರ್ಧಿಸಲಿದುವೆಸು | ಕ್ಷೇಮವೆನುತ ತೋರ್ಪುದೂ ॥ ೭ ॥

॥ ಭಾಮಿನಿ ॥

ಎಂದು ನಾನಾ ತೆರದಿ ರಾಜ್ಯದಿ। ಬಂದ ಪೊಸ ದಂಡನೆಯು ಮೂರ್ಖರ। ವೃಂದ ವರ್ಣಿಸಿ ಪ್ರಭು ಮನವನು ಪ್ರಸನ್ನಗೊಳಿಸುತಿರೇ ॥ ಬಂದರಿಬ್ಬರು ಚರರು ಸಭೆಗೈ। ತಂದು ಕುರ್ನಿ೯ಸಾತ ರೀತಿಯ। ವಂದನೆಯುನರ್ಪಿಸುತ ಭಿನ್ನವಿಸಿದರು ಭೀತಿಯಲೀ ॥ ೧ ॥

॥ ರಾಗ । ಮುಖಾರಿ । ಏಕ ॥

ಸಲಾಂ ತಕ್ಕೊ ಡಿಲ್ಲಿ ಪುರಾಧಿಪ। ಸಲಾಂ ಇಸ್ಲಾಂ ಪ್ರತಿರೂಪಾ ॥ ಸಲಾಂ ಯವನರ ಧರ್ಮಾವತಾರ। ಸಲಾಂ ಹಿಂದೂ ಸಂಹಾರ ॥ ಸಲಾಂ ॥ ೧ ॥ ಜ್ಯೇಷ್ಠಗೆ ಜನಿಸಿದ ಸುತನೊಳು ಮಮತೆಯು। ಸಿಟ್ಟೊ ದೌಲತಬಾದಿ ನೊಳೂ ॥ ಪಟ್ಟವನಿತ್ತು ಬಹವುದ್ದೀನನ। ಬಿಟ್ಟರಿ ಸಲುಗೆಯೋತನನೂ ॥ ಸಲಾಂ॥ ॥ ೨ ॥ ಗುಟ್ಟಿದು ಪೇಳುವೆ ನೀವೀ ಕಡೆ ಕೈ। ಕಟ್ಟಿ ಕುಳಿತಡಿಮ ಬಲು ಮೋಸಾ ॥ ಪಟ್ಟಣದಲಿ ಸುಬೇದಾರನ ಬಲದಲಿ। ಪುಟ್ಟಿದೆ ಕಾಫರ ಪೊಸವೇಶಾ ॥ ಸಲಾಂ ॥ ೩ ॥ ಸತ್ಯದ ಮಾತಿದು ಪ್ರಭು ಹಿಂದೂ ವಶ। ವರ್ತಿಯ ತೆರದಲಿ ತೋರುವುದೂ ॥ ಗುಪ್ತಚರರು ನಾವ್ ತಿಳಿದುದ ಪೇಳ್ವೆವು। ಚಿತ್ತದ ತೆರ ನೀವ್ ಗೈಯ್ಯುವುದೂ ಸಲಾಂ ॥ ೪ ॥

॥ ರಾಗ । ಸೌರಾಷ್ಟ್ರ । ತ್ರಿವುಡೆ ॥

ಏನಿದಚ್ಚರಿ ಹಿಂದು ಕುಲದಭಿ। ಮಾನಿಯೆನಿಸಿದ ಧರ್ಮದ್ರೋಹಿಯ। ಖೂನಿಗೈದೊರೆಸುವಡೆ ಪೊರಡಲಿ। ಸೇನೆ ಭರದೀ ॥ ೧ ॥ ಪುಟ್ಟಿದಾತನು ಜ್ಯೇಷ್ಠಗೆನ್ನುತ। ಕೊಟ್ಟೆರಧಿಕಾರದೊಳು ತಲೆಯನು ॥ ಮೆಟ್ಟಲುಮ್ಮಳಿಸಿದ ದುರಾತ್ಮನ। ಕಟ್ಟಿ ತರುವಾ ॥ ೨ ॥ ತ್ರಾಣವಂತರದಾರಿನಲ್ಕೆ ಜಿ। ಹಾನನೆಂದನು ವೀಳ್ಯವಿತ್ತಡೆ ॥ ಖಾನನನು ತಂದೊಪ್ಪಿಸುವೆನನು। ಮಾನವಿಲ್ಲಾ ॥ ೩ ॥

॥ ವಾರ್ಧಿಕ ॥

ರಣ ವೀಳ್ಯವನು ಪಡದು ಸೈನ್ಯವನ್ನೊಡಗೊಂಡು। ವನಧಿ ಘೋಷದಿ ಪಥವ ಕ್ರಮಿಸುತಿರಲಿಕ್ಕೆಲದ। ಜನತತಿಯು ಬರಡಾಯ್ತು। ಯವನರತ್ಯಾಚಾರ ವದು ಮೇರೆದಪ್ಪಿದಂತೇ ॥ ಮನೆಗಳನು ಪೊಗುತ ತಡವರ ಕೊಂದು ಯವ್ವನದ। ವನಿತೆಯರ ಕೆಡಿಸಿ ಸಿಕ್ಕಿದ ವಸ್ತುಗಳ ಸುಲಿದು। ಜನರ ಶಾಪವ ಪೊತ್ತ ಸೇನೆ ದೌಲತಬಾದಿ। ನೊಳು ಬೀಡು ಬಿಟ್ಟುದರಿತೂ ॥ ೧ ॥

॥ ರಾಗ । ನಾಟ । ಅಷ್ಟ ॥

ಯುದ್ಧ ಸಂಘಟಿಸಿದ ಬಗೆಯೂ । ಕಂಡು । ಬುದ್ಧಿವಂತನು ಶಾಸ
ನೊರೆದ ಸೀಗತಿಯೂ । ಇದ್ದುದೆನ್ನಯ ಪಾಲ್ಗೆ । ಬದ್ಧವಿದೆನುತ ನಂ । ಬಿಟ್ಟೆ
ಮುಂದೆನ್ನಗಿಲ್ಲಿ । ಇದ್ದರೆ ಮರಣವು ॥ ಯುದ್ಧ ॥ ೧ ॥ ಕೊಳು ಗುಳ
ಕೊದಗಲಾತನೊಳು । ಜಯ । ಲಲನೆಯು ನೊಲಿಸಲೆನ್ನಿಂದಸದಳವೂ ॥
ಕೊಲಿಸಲ್ಯಾತಕೆ ವ್ಯರ್ಥ ಬಲವನ್ನು ಕದನದಿ ॥ ಉಳಿವುಪಾಯವಿದೊಂದು ।
ಹೊಳೆವುದು ಮನಸಿಗೆ ॥ ೨ ॥ ಇಂದು ಸ್ವತಂತ್ರ ರಾಷ್ಟ್ರದೊಳೂ । ಆನೆ ।
ಗೊಂದಿಯ ನೃಪರತಿ ಬಲರೂ ॥ ಹಿಂದು । ಗಳನು ಸೇರ್ವೆ । ನೆಂದೋರ್ವನರ
ಯದೆ । ಬಂದಾನೆ ಗೊಂದಿಯೊಳ್ । ಸಂಧಿಸೆ ಹರಿಹರ ॥ ॥ ೩ ॥

॥ ರಾ । ಭೈರವಿ । ಝುಂಪೆ ॥

ಯಾರಯ್ಯ ನೋಡಲು ಘ । ೕರ ನಂತಿರೆ ನೀನು ॥ ಇವರಿ ಬಂದಿಹ
ಕಾರ್ಯ । ಘೋರವನುಸುರಿಸಲು ॥ ೧ ॥ ನಾಯಕರೆ ಪಟ್ಟಣದ । ರಾಯ ದರುಶನ
ಕಾಗಿ ॥ ಬಾಯಾರಿ ಬಂದ ಬಡ । ನಾಯಿಯು ನಾನೂ ॥ ೨ ॥ ಅನುಚಿತವಿದು
ಭಯರೊಳು । ಘನ ದ್ವೇಷ ಮಸಗುತಿರೆ ॥ ಜನ ಪಂಡಿತನ ಭೇಟಿ । ಯನು
ಬಯಸಲ್ಯಾಕೆ ॥ ೩ ॥ ಹರಿಹರನ ನೋಡ್ವೆನೆ । ದೊರೆಯು ದರುಶನಗೈವ ॥
ಭರವಸೆಯೊಳ್ಕೈತಂದೆ । ನೆರೆದ್ರೋಹಿಯಲ್ಲಾ ॥ ೪ ॥

॥ ಭಾಮಿನಿ ॥

ಶತ್ರು ಪಕ್ಷದವನೆನುತ ನಾಯಕ । ಚಿತ್ತ ವೃತ್ತಿಯೊಳವನ ಪ್ರಭುಗಳ ।
ಹತ್ತಿರಕೆ ಕರದೊಯ್ಯೆ ನಿರಾಕರಿಸುತ ಬೆಸಗೊಂಡಾ ॥ ವೃತ್ತಿಪಾಲಗೆ ಮುದದಿ
ನುಡಿವನು । ಚಿತ್ತ ದುಮ್ಮಾನದಲಿ ಕೇಳ್ ಮಿತ್ರ । ಶತ್ರುಪಕ್ಷ ದರಿದ್ರ ಬ್ರಾಹ್ಮ
ಣಾನ ತಾನೆಂದಾ ॥ ೧ ॥

॥ ರಾಗ । ಕಾಫಿ । ಅಷ್ಟ ॥

ಚಿತ್ತವಿಸು ಜನನಾಥ ಎನ್ನಳಲಾ । ನಿನಗೊರವೆ ಬಂದಾ । ಪತ್ತ ಮದ
ವ್ಯಾಪ ಖಾಜಿ ಪಾಲ್ಸಿಗನಾ ॥ ಮತ್ಸರಕೆ ಬಲಿಯಾಗಿ ಎನ್ನನು । ವೃತ್ತಿ ಗೊಳಿ
ಸಲು ಬಗೆಯುತಿಂಜಾತ ॥ ಗುಪ್ತ ವೇಷದಿ ಬಂದೆನಾಶ್ರಯ । ಮಿತ್ರ ಘೋರಿ ಎನ
ಗೀಯುತಭಯವ । ಚಿತ್ತವಿಸು ॥ ೧ ॥ ಕ್ರೂರ ಮ್ಲೇಂಛಾಧಿಪನ ನೋಳ್ಪೆನೀ ।
ಸದ್ಗುಣವನೆಲ್ಲವ । ಪಾರಿ ಮುಖ ಸ್ತುತಿಯಿಂದ ತನು ಜೀಪಿಸೇ ॥ ಪಾರ

ಮಾರ್ಗದ ಹಿಂದುಗಳ ಸಂ। ಹಾರ ಸತಿಯರ ಕೆಡಿಸಲೆಂದಿಗು ॥ ಸೇರೆಂಬ ಹಿತೋಕ್ತಿಯಾತಗೆ। ತೋರಿತದುವೆ ಕೃತಘ್ನನಂದದೀ ॥ ಚಿತ್ರವಿಸು ॥ ೨ ॥ ಪೊರಟೆ ನಾನದರಿಂದ ನಿಮ್ಮಲ್ಲೀ। ಸ್ನೇಹ ರಕ್ಷಣೆ। ದೊರೆವುದೆಂಬಭಿ ಲಾಷೆ ಮನಸಿನಲಿ ॥ ಎರಡು ಬಗೆವವನಲ್ಲ ಮೊಪಲು। ಹರಣವನು ಕಳಕೊಂಬುದಲ್ಲದೆ। ಧುರುಳನಾತಗೆ ಮರಣ ಪರಿಯಂ। ತರವು ಶರಣೆನೆ। ಅರುಹಿಭಾವನೆ ॥ ಚಿತ್ರ ವಿಸು ॥ ೩ ॥

॥ ವಾರ್ಧಿಕ ॥

ಧುರಪ್ರಾಪ್ತವಾಗೆ ತನ್ನಗ್ರಜನ ತೊರೆದು ರಘು। ವರನ ಸೇರಿದ ವಿಭೀಷಣನಂತೆ ಭಾರತಾ। ಧುರಮಧ್ಯದಿಂ ಪೊರಟು ಪಾಂಡವರ ಸೇರಿದ ಯುಯುತ್ಸುವಿನ ಚರಿತೆಯಂತೇ ॥ ಶರಣು ಬಂದವನಾವನಾತನಾದರು ತಿರ। ಸ್ಕರಿಸುವುದು ಕ್ಷತ್ರಿಕುಲಕಪಮಾನ ಧರ್ಮ ಬಾ। ಹಿರವಾದಡಿದು ಯವನ ದ್ವೇಷಾಗ್ನಿಗಜವಪ್ಪುದೆನೆ ದೇವರಾಯ ನುಡಿದಾ ॥ ೧ ॥

॥ ರಾಗ । ಸಾಂಗತ್ಯ । ರೂಪಕ ॥

ಆಶ್ಚರಿಯವಿದನಂಬ। ಲೆಂತು ಸೌಭಾಗ್ಯದ। ಉಚ್ಚ ಶಿಖರವೊಳು ಮೆರವಾ ॥ ನೆಚ್ಚಿನ ಕಿರಿಯಪ್ಪ ಹಗೆಯಾಗಿ ಬಂದವ। ನೆಚ್ಚುವನೆಂತು ನಮ್ಮ। ವನು ॥ ೧ ॥ ಜಗಪತಿ ಪೇಳ್ವ ಸುಲ್ತಾನ ತನ್ನಣ್ಣನ। ಮಗನನೀ ರೀತಿ ದಂಡಿ ಸಲೂ ಅಗಣಿತ ಅಪರಾಧವೇನು ರಹಸ್ಯದ। ಬಗೆಗಳನರಿಯೆ ಬಂದಿಹನೂ ॥ ೨ ॥ ತಪ್ಪುಗೈದವನಲ್ಲ ಹುಟ್ಟು ಮುಸ್ಲಿಮನಾದ। ತಪ್ಪೊಂದು ಮಿಗೆ ಮಹಮ್ಮದಸಾ ॥ ಅಪ್ಪನ ಹಿರಿ ಸುತಗುದಿಸಿ ಬಂದುದು ಘೋರ। ತಪ್ಪ ತಿದ್ದುವ ದಾರಿ ಕಾಣೇ ॥ ೩ ॥ ನಾಯಕ ಬುಕ್ಕನೆಂದನು ಪಂಚತಂತ್ರದ। ವಾಯಸ ಶುಕ ಗಾದೆಯಂತೇ ॥ ಜೀಯ ನಮ್ಮಗ್ನಿ ಕುಂಡದೊಳಿಟ್ಟು ಕೊಲುವರೆ। ನಾಯಕ ಪೈಯವನರದೂ ॥ ೪ ॥ ಊರ್ವಶಿಗಾದ ಸಂಗರದಂತೆ ತಮ್ಮೊಳು। ಹೋರಾಡಿ ಲಯವಾದರೆಮಗೇ ॥ ಧಾರುಣೀಶನೆ ಸೌಖ್ಯವಹುದು ಭಾವಿಸಲು ಭೂ। ಭಾರ ತಗ್ಗುವುದೆಂದನೂ ॥ ೫ ॥ ಮಾನವತ್ವವನುಳ್ಳ ಮಾನವನಂತಿರೆ। ದಾನವನಧಿಕಾರ ಬಿಡದೂ ॥ ಹೀನ ಹಿಂಸಾ ಕೃತ್ಯಕೊದಗವರ ಸಿಕ್ಕ। ದಾನವನಂತೆ ಸಂಹರಿಪಾ ॥ ೬ ॥

|| ಭಾಮಿನಿ ||

ಇಸಿತು ನಾನಾ ವಿಧದಿ ಶೋಧಿಸಿ । ಜನಪನರಿತ ಕೃತಜ್ಞ ಸೀತನು । ವಿನಯ ವಂಚಕನಲ್ಲಿನುತ ಸಂಕ್ಷೆಪಿ ಸಭೆಗೆಂದಾ || ರಣವು ಸಿಸ್ತಯವಾಯ್ತು ಧವರ್ಮೋ । ದ್ಧರಣಯಾಗದ ನಾಂದಿ ನಮ್ಮಯ । ಘನ ತರದ ಸ್ವಾತಂತ್ರ ರುದ್ರ ಪರೀಕ್ಷೆಯೊದಗಿದುದೂ || ೧ ||

|| ಕಂದಪದ್ಯ ||

ಎನುತಲಿ ಸಭೆಯಿಂದೆದ್ದಾ । ಘನವಿಕ್ರಮಿ ಹರಿಹರನೊಡ ಗೊಂಡಾಗಳ್ || ಮನುಜೇಶ್ವರ ಪದ್ಮಾವತಿ । ತನುಜೆಯು ನೋಳ್ವಾಳುರದೊಳಗೈತಂದಂ || ೧ ||

|| ರಾ । ಕಾಂಬೋಧಿ । ಜಂಪೆ ||

ಚಿತ್ತವಿಸು ಜನಪ । ಪದ್ಮಾವತಿಯು ಸ್ತ್ರೀ ಸೈನ್ಯ । ಮುತ್ಸವವ ಪೊಗಳಲಳವಲ್ಲಾ || ಶಸ್ತ್ರಾಸ್ತ್ರ ಸನ್ನದ್ಧ । ರಾಗಿ ರಣ ಪಾಂಡಿತ್ಯ । ವೆತ್ತು ಶೋಭಿಸುತೀರ್ವರಾಗ || ಚಿತ್ತವಿಸು || ೧ || ಗರಡಿ ಸಾಧನೆಯಿಂದ । ಉರೆ ಬಲಿತ ದೇಹಿಗಳು । ಶಿರಸ್ತ್ರಾಣ ವಜ್ರ ಕವಚಗಳಾ || ಕರದ ಕಡುಗವ ಝಳಪಿಸುತನೆರದ ಸತಿಯರನು । ಕರವು ಪೇಳಿದಳು ನೃಪ ತನುಜೆ || ೨ || ನಾಳೆ ಯುವನರ ರಕ್ತ । ಧಾಳಿಗೆದೆ । ಯೊಡ್ಡುವರೆ । ಬೀಳಲಾಗದು ಹಿಂದೆ ನಾವೂ || ಬಾಲೆಯರ ಕೈ ಜಳಕರುಿತ ರೆದೆಯೊಳು ವಜ್ರ । ಶೂಲವೆಂಬುದ ಜಗಕೆ ತಿಳಿದೂ || ೩ || ಅಕ್ಕ ಪಕ್ಕದ ನಮ್ಮ । ಅಕ್ಕ ತಂಗಿಯರಿಂದು । ದುಃಖಿಸುತ್ತಿರಲು ವಿಧಿಪರದೀ ಲೆಕ್ಕಿಸದೆ ರಾಜೋಪ ಭೋಗದ ವಿಲಾಸದೊಳು । ಸಿಕ್ಕಿ ಸಂತಸ ಗೊಳುವದ್ಯಾಕೇ || ೪ ||

|| ಭಾಮಿನಿ ||

ವಸಿತೆ ವೀರಾ ವೇಶದೊಳು ರಣ । ಕಣದೊಳಸ್ತ್ರ ಪ್ರಯೋಗವನು ಸ್ತ್ರೀ । ಗಣಕೆ ಸೂಚಿಸುತಿರಲು ನೃಪನಾಗಮುವ ನೆರೆ ಕಂಡೂ || ಮನದಿ ಲಜ್ಜಿಸಿ ಮಣಿದು ನಿಂದಿಹ । ತನುಜೆಯನು ಬಿಗಿದಪ್ಪಿ ಮುದ್ದಿಸಿ । ವಿನಯದಿಂ ಹರಿಹರನ ಹತ್ತಿರ ಕರವು ಪೇಳಿದನೂ || ೧ ||

|| ರಾ । ಮಧ್ಯಮಾವತಿ । ತ್ರಿವುಡೆ ||

ಘುರ ಸಮರ್ಥನೆ ಲಾಲಿಸೆನ್ನಯ । ತರಳ ಪದ್ಮಾವತಿಯನೂ || ಹರುಷದೊಳು ನಿನಗೊಪ್ಪಿಸುವೆ ಪತಿ । ಕರಿಸಿ ಯುದ್ಧರಿಸೆನ್ನನೂ || ಪಿತೃ ರುಣವನೂ

॥ ೧ ॥ ನಾಳೆಯುವನರೊಳೊದಗೆ ಕಾಳಗ । ಸೋಲು ಗೆಲುವುಗಳರಿಯದೂ ॥ ಬಾಲಕಿಯು ಬಾಳುವೆಯ ಭಾರವ । ಶೀಲಸಿಧಿ ಸಿನಗೊಪ್ಪಿಪೇ ॥ ಧನ್ಯನೆಸಿಪೇ ॥ ೨ ॥ ಪುಲ್ಲಲೋಚನೆಯಂತರಂಗವ । ಬಲ್ಲಿ ಮೊದಲೆನುತಾಕೆಯಾ ॥ ಬಲ್ಲಿದನ ಹಸ್ತದೊಳಗಿಡಲಾ । ನಲ್ಲೆಯುರು ಜಯ ಘೋಷದೀ । ನಲಿಯೇ ಮುದದಿ ॥ ೩ ॥

॥ ವಾರ್ಧಿಕ ॥

ಹರಿಹರಂ ಮಗುಳೆಂದ ಧೊರೆಕುವರಿಯೊಲಿದು ಜಯ । ಸಿರಿವರಿಸಿ ದಂತಾಯ್ತು ಬರುವ ಯುವನರ ಬಡಿದು । ಧುರುಳರ ಸಮಾಧಿಯೊಳು ಬಲಿವೆ ಸ್ವಾತಂತ್ರ್ಯ ಸೌಧವನೆನಲು ಪದ್ಮಾವತೀ ॥ ವರದಳಷ್ಟ ಸಹಸ್ರ ತರುಣಿಯರ ನೆರವಿಯೊಳು । ಬರುವೆ ಬೆಂಬಲಕಾನು ದುರುಳ ಸಂಹಾರದಲಿ । ಅರಮನೆ ಯೊಳಿಹನಾರಿ ಧುರಕಿಳಿಯೆ ಹೆಮ್ಮಾರಿ ಎನುವುದನು ಜಗವರಿಯಲೀ ॥ ೧ ॥

ಇತ್ತಲುಾ ದೇವರಾಜಕ ನಾಮದೋರ್ವ ವಣಿಜೋತ್ತಮಂ ಸುತೆ ಸುಶೀಲೆಯ ಪರಿಣಯುವಗೈದು । ಚಿತ್ತತೋಷದೊಳಿರ್ದಡತ್ತ ಜಾಮಾತ ತ । ನ್ನಾಪ್ತ ಸತಿಯಂ ಕಳುಹಲೂ ॥ ಪತ್ರದೊಳು ಸೂಚಿಸಿರೆ ವಣಿಜೇಶ ವ್ಯಾಪಾರ । ವೃತ್ತಿಗೊಂದಲದಿಂದಲದಗಣಿಸದಿರುತಿರ್ದ । ಮುತ್ತುರತ್ನಾದಿಗಳ ಶೇಖರಿಸಿ ಲಾಭ ನಷ್ಟಾದಿಗಳನೆಣಿಸಿ ಕೊಂಡೂ ॥ ೨ ॥

॥ ರಾಗ । ಸಾಂಗತ್ಯ । ರೂಪಕ ॥

ಒಂದು ದಿವಸ ದೇವ ರಾಜ ವ್ಯಾಪಾರದ । ಸಂದೇಹಗಳನು ಯೋಚಿ ಸುತಾ ॥ ಮಂದಿರದೊಳಗಿರಲಾತನರ್ಧಾಂಗಿ ತಾ । ಬಂದಲ್ಲಿ ಪೇಳ್ದಳಿಂತೆಂದೂ ॥ ೧ ॥ ಮುತ್ತುರತ್ನಗಳ ಜೋಪಾನ ಕಾಂಚನದಾಶೆ । ವೃತ್ತಿಯನುಳಿದೊಂದು ದಿವಸಾ ॥ ಪತ್ನಿ ಪುತ್ರರ ಕ್ಷೇಮ । ಮನೆವಾರ್ತೆ ಕಡೆಗೊಮ್ಮೆ । ಒತ್ತಲಾಗವೆ ನಿಮ್ಮ ಮನಸಾ ॥ ೨ ॥ ದಿಗಿಲೆದ್ದು ಕೇಳ್ದ ಕಾಮಿನಿಸಿರನ್ನೆ ಇಂದೇನು । ಹಗರಣ ವಾಯ್ತು ಮಂದಿರದೀ ॥ ಸೊಗಯಿಪುದೆಮ್ಮ ಸಂಸಾರ ನಾಡೊಳಗಿಂದು । ಅಗಣಿತ ಸೌಭಾಗ್ಯನಿಹುದೂ ॥ ೩ ॥ ಪ್ರೀತ ಚಿತ್ತೈಸೆಮ್ಮ ಸುತೆಯನ್ನು ಕಳುಹೆ ಜಾ । ಮಾತನೋಲೆಯ ಬರೆದೂ ॥ ಮಾತೇನು ಮಾಸ ಮೂರಾಯ್ತಿನ್ನು ನೋಡಲು। ನೀತಿಯಲ್ಲವು ನಮ್ಮ ನಡತೇ ॥ ೪ ॥ ಮರುಳೆ ಮಾನಿನಿಯೆಪ । ನರಿವೆನಾದರು ಮ್ಲೇಂಚ । ಬಿರುತರ ಭಯವಿರೆ ಪಥದೀ ॥ ತರಳೆಯ ಪತಿಗೃಹ ಕೆಂತು ನಾ ಕಳುಹುವೆ । ಇರುವಂಜಿಕೆಯ ಪೇಳ್ದಿ ನಿನಗೇ ॥ ೫ ॥

॥ ಭಾಮಿನಿ ॥

ಆದುದಾಗಲಿ ನಾಳೆ ಸುತೆಯನು । ಮೋದದಿಂ ಪತಿಗೃಹಕೆ ಕಳುಹಲು ।
ಸಾಧಿಸುವೆನೆನುತಾಕೆಯನ್ನೊಡಂಬಡಿಸಿ ವೈಶ್ಯನಿರೇ । ಮೇಧಿನೀ ಸುರ
ನಾರಾಯಣನ ಸುತ । ರಾದ ಸಾಯಣ ಮಾಧವರು ಶಾ । ಸ್ತ್ರಾದಿಗಳ ಗುರು
ಮುಖದಿ ಪಠಿಸುತಲಿರ್ದನುದಿನವೂ ॥ ೧ ॥

॥ ವಾರ್ಧಿಕ ॥

ಬಿಸಜ ಬಾಂಧವನುದಯ ಕಾಲದೊಳಗೊಂದಿವಸ । ಪಸನ ಗಂಗಾ
ತಟದಿ ಹಿಂದು ಮಾಧವ ಕರ್ಮ । ಕುಶಲದಿಂದಿನಗರ್ಘ್ಯವಿತ್ತು ಕನ್ನಡನಾಡ ।
ವಿಷಮತೆಯ ನೆನೆನೆನೆಯುತಾ । ವಿಷ ಬೀಜವೀಯುವನ । ರವನೀಶನಾಗದಿರೆ ।
ಬಸವಳಿದ ಭಾರತವನುದ್ಧರಿಪ್ರದೆಂತೀಗ । ದೆಸೆಗೆಟ್ಟು ಹಿಂದು ಸಂಸ್ಕೃತಿ ಸನಾ
ತನ ಧರ್ಮ । ನಶಿಸುತಿದೆ ದಿನ ದಿನ ದೊಳೂ ॥ ೧ ॥

॥ ರಾಗ । ಕೇತಾರಗೌಳ ॥ ಅಷ್ಟ ॥

ಎಂದು ಧರ್ಮಕೆ ಚ್ಯುತಿ । ಬಂದ ಬಗೆಗೆ ಮನ । ನೊಂದು ಮರುಗು
ತಿರಲೂ ॥ ಅಂದು ವೈಶ್ಯನು ತನ್ನ । ನಂದನೆಯೊಡಗೊಂಡು । ಬಂದನಾ ಪಥ
ಹಿಡಿದೂ ॥ ೧ ॥ ವಧು ವೇರ್ದಪಾಲಕಿ । ಯದನು ದೂರದಿ ಕಂಡು । ಮದ
ಮುಖಯವನ ಸೈನಿಕರೂ । ಕುದುರೆಯನೇರಿ ಬಂ । ದದ ಹಾಯ್ದು ತಡೆದರು ।
ವಿಧ ವಿಧ ಚೇಷ್ಟೆಯಿಂದಾ ॥ ೨ ॥

॥ ರಾಗ । ಝುಜಾವಂತು । ಏಕ ॥

ಮತ್ತಿದ ಜನರ ದು । ಷ್ಕೃತ್ಯಕೆ ಬಲು ಜಿದ । ರುತ್ತಲಿ ತಮ್ಮಾಯು ।
ಧಸ್ತ್ರವ ತುಡುಕಲು । ಮತ್ತಾ ಯವನರು । ದೈತ್ಯವತಾರದಿ । ಕತ್ತಿಯೊಳಲ್ಲರ ।
ಕತ್ತರಿಸಿದರೂ ॥ ಪನನೆಂಜಿ ॥ ೧ ॥ ಹಿಡಿದೆಳೆದೊಡನಾ । ಹುಡುಗಿಯ
ಮಾನವ । ಕೆಡಿಪುದು ಕಾಣುತ । ತಡೆಯದೆ ಮಾಧವ ॥ ಘುಡು ಘುಡಿಸುತ
ಬಂ । ದೊಡನಾ ದುರುಳರ । ಹಿಡಿದ ಸಮಿಧೆಯೊಳು । ಬಡಿಯು ತೊಡಗಿದಾ ॥

॥ ಭಾಮಿನಿ ॥

ನಿಲುವರುಂಟೇ ಬ್ರಹ್ಮ ತೇಜದ । ಬಲದಿದಿರು ರಾಷ್ಟ್ರತನಕ್ಕಾಗ ।
ಸೆಳೆದು ಮಾಧವನೋಪನೆ ಯೋರಾಡಿ ಬಿಕ್ಕಪಟ್ಟಾ ॥ ತಲೆಗಳನು ಜಂಜಾಡಿ
ಶಾಸಕ । ಕುಲವಿರೋಧಿಯ ತೆರದೊಳಿರಲಾ । ಬಲೆ ಮನವ ಪೊರದೆ
ಎನುತೆರಗಿದಳು ಚರಣದಲೀ ॥ ೧ ॥

॥ ರಾಗ । ಸಾಂಗತ್ಯ । ರೂಪಕ ॥

ಮಾನ ಪ್ರಾಣಗಳೆತ್ತು ಪೋದಡೆ ಬಿಸ್ಸನು ಪೆತ್ತ । ಮಾನವಂತೆಗೆ ನಮೊ ಎನುತಾ ॥ ಮಾನುನಿ ಮರುಗೆ ಸಂತೈಸುತೆಂದನು ಪ್ರೇಂಭ । ಹೀನ ಪಾಪಾರ್ಜ ಣದೀ ॥ ೧ ॥ ನಿಲುಪಲೆಕ್ಕ್ರನು ನಿರ್ಘಾತ ತಾವಿಲ್ಲದೆ । ಅಳಿಗಾಲವಿಲ್ಲ ಹಿಂದಿ ಗಳಾ । ಕೊಲೆಯ ರಕ್ತದ ನದಿ ಹರಿದು ಪವಿತ್ರದ ಇಳೆಯೆಲ್ಲ ಮುಳುಗಿಹುದೂ ॥ ೨ ॥

॥ ವಾರ್ಧಿಕ ॥

ಎನುತ ಸಂತೈಸಿ ಪಾಲಕಿಯ ಬಿಟ್ಟೋಡಿರುವ । ಜನರ ನಾರಿಸಿತೆಂದು ಮನೆಗಾಕೆಯಂ ಕಳುಹ । ಲನಿತರೊಳು ಬಂದರಲ್ಲಿಗೆ ಶಂಕರಾನಂದ ಭಾರತೀ ಗುರುವರ್ಯರೂ ॥ ಮಣಿದು ಮಾಧವ ನಡೆದುದೆಲ್ಲವಂ ನಿವರಿಸುತ । ಮನ ಕರಗಿ ಪೇಳ್ದನೆಲೆ ಗುರುರಾಯ ನೀವಿಧಿಯು । ಕೊನೆಯುಪ್ಪುದೆಂತು ॥ ನಮ್ಮಾಳಿ ಗಾಲವೆಂತೆನಲು ಮನದಿ ಯೋಚಿಸುತಲವರೂ ॥ ॥ ೧ ॥

॥ ರಾ । ಕೇತಾರ ಗೌಳ । ಜಂಪೆ ॥

ಅರಿತೆ ನಾ ನಿನ್ನ ಮನವಾ । ಮರುಗಿದೊಡೆ । ಬರುವುದೇ ಫಲ ಮಾಧವಾ ॥ ಕಿರಿಯ ಕಾರ್ಯವಿದಲ್ಲವೂ । ನಮ್ಮಿಂದ । ಪರಿಹರಿಸುವೊಡ ಸಾಧ್ಯವೂ । ೧ ॥ ಗುರುವರ್ಯ ಮುಂದೆ ಜಗದೀ । ಭೃಗುಕುಲದ । ಪರಶು ಧಾರಕ ನಂದದೀ ॥ ಧರೆಯ ವಿಪ್ರರು ಕರ್ಮವಾ । ಪರಿತ್ಯಜಿಸಿ । ಧರಿಪ ರೊಹುದು ಖಡ್ಗವಾ । ೨ ॥ ಮರುಳುತನವಿದು ನೃಪಕುಲ । ಒಮ್ಮತವ । ತೊರೆದುದರಿಂದೀ ದುಷ್ಫಲ । ಧೀರ ಧೀರ ಪೊಯ್ಸಾಳರೂ । ಕಾಕತೀ । ಯರು ನಿತ್ಯ ಕೆಣಕುತಿ ಹರೂ ॥ ೩ ॥

॥ ಭಾಮಿನಿ ॥

ಧರ್ಮ ಸೂಕ್ತಿಯ ನೊರವೆ ಪಾಲಿಸು । ಧರ್ಮ ಪುರುಷರು ಜನಿಸಿ ಹಿಂದೂ । ಧರ್ಮವನ್ನುದ್ಧರಿಸಿ ಸೇತು ಹಿಮಾಚಲದ ವರೆಗೇ ॥ ಕರ್ಮ ಭೂಮಿಯ ಜನರ ಮೇಲ್ಮೆಗೆ । ಧರ್ಮವನು ಬೆಳಗಿಸಿದರಿಂದಿಗೆ । ಧರ್ಮ ಶ್ರಷ್ಟೆಯು ಶೂನ್ಯವಾಗಿದೆ ಜನರ ಹೃದಯದಲೀ ॥ ೧ ॥

ಬ್ರಹ್ಮ ಕುಲಜನೆ। ರಾಷ್ಟ್ರ ಸಾಧಕೆ। ಧರ್ಮವೇ ಅಡಿಗಲ್ಲು ಕೇಳ್ ಸ। ದ್ಧರ್ಮವೆನುವ ಮಹಾ ಶಾಲೆಯುನಾಂತಿಹವು ರಾಷ್ಟ್ರಗಳೂ ॥ ಧರ್ಮಚ್ಯುತಿಯಿಂ ರಾಜ್ಯಕೆಟ್ಟಾ। ಧರ್ಮದಿಂದಲಿ ಶೀಲ ಕೆಡುವುದು। ಧರ್ಮಸುಸ್ಥಿರವಾಗೆ ತಪಶ್ಶಕ್ತಿಯನು ಬೆಳಸುವುದೂ ॥ ೨ ॥

ಸೂಕ್ತವಿದು ರಾಷ್ಟ್ರದ ಅಚೇತನ। ವ್ಯಕ್ತವಾಗಿಹ ಕುಂಡಲೀನೀ। ಶಕ್ತಿ ಜಾಗೃತವಾಗೆ ಕ್ಷೇಮಿಗಳಹೆವು ತಪಸ್ಯೆಯಾ ॥ ಶಕ್ತಿಯನು ಬಡಿದೆಬ್ಬಿಸುವ ಘನ। ವ್ಯಕ್ತಿಯವತರಿಸುತಲಿ ದೈನಿಕ। ಶಕ್ತಿಯಿಂ ನವರಾಷ್ಟ್ರ ನಿರ್ಮಿಸೆ ಸಿದ್ಧ ಯುವದಾಯ್ತೂ ॥ ೩ ॥

॥ ರಾಗ । ಕಾಫಿ । ಏಕತಾಳ ॥

ಗುರುವರನೆ ಕೇಳರಿತೆ ಮನದೊಳವಾ। ಯುಗ ಯುಗದಿ ಧರ್ಮವ। ಪೊರೆಯಲವತರಿಸುವನು ಹರಿಯೆನುವಾ। ಭರವಸೆಯನಾಂತಿರಲು ಶಾಕ್ತ್ಯೆಯು। ಬರುವುವೇ ಬಾಂಧವರು ನಿತ್ಯವು। ಶಿರವಯವನ ಕುಠಾರಧಾರೆಗೆ। ಎರಗಿಸುತಿಹ ಕಠಿಣಕಾಲದಿ। ಗುರುವರನೆ ॥ ೧ ॥ ಆದಡೊಂದಿದೆ ಕೇಳು ಪೇಳುವೆನೊ। ಮನವಿರಲು ನಾಳೆಯೆ। ವಾದಿಸದೆ ನಡೆ ಸೇರುಕಂಟಯನೂ ॥ ಆ ದಯಾಂಬುಧಿ ಗುರುವಿನಾಶೀ। ರ್ವಾದ ಬಲದಿ ಸ್ವರಾಜ್ಯ ಸ್ಥಾಪಿಸೆ। ಸಾಧಿಸುವಡೆ ನಿಮಿತ್ತನಹೆ ನು। ತ್ತಾದಿ ಶಕ್ತಿಯು ನಿನಗೊಲಿಯುವಳು ॥ ಗುರು ॥ ೨ ॥

॥ ಭಾಮಿನಿ ॥

ಮಣಿದು ಮಾಧವ ಮನೆಯೆಡೆಗೆ ಬರೆ। ವನದೊಳಿಂತಾದುದನು ತಿಳಿದಿಹ। ಜನನಿ ಕಣ್ಣೀರಿಡುತ ಸುಕುಮಾರನನು ಬಿಗಿದಪ್ಪಿ। ತನಯ ಗೆಂದಳು ಮಗನೆ ಬರಿದೇ। ಘನ ಬಲಾಢ್ಯರ ಹಗೆಯೊಳಪ್ಪುದು। ಜಗದೊಳಗೆ ಲೇಸಲ್ಲ ದುರ್ಬಲರಾವು ವಿಪ್ರಜರೂ ॥ ೧ ॥

॥ ರಾ । ಮಾರವಿ । ಅಷ್ಟ ॥

ಕಂದ ನೀನೇಕಿಂತು ಗೈಯ್ಯುವೇ। ಹಿಂದೆ। ಮುಂದೆ ಬಹಾಪತ್ತ ಮರೆಯುವೇ ॥ ಕೊಂದು ಕಳೆಯೆ ಮುಸಲ್ಮಾನರಾ। ಧೈರ್ಯ। ದಿಂದ ಕಾಣೆನು ನಮ್ಮ ತಾವರಾ ॥ ೧ ॥ ಅಮ್ಮನಿವೀ ರೀತಿ ನುಡಿವರೇ। ಬಡ। ಹೆಮ್ಮಕ್ಕಳನು ಮುತ್ತಿ ಕೊಲುತಿರೇ ॥ ಸುಮ್ಮನಿರಲು ಮನ ಬಾರದೂ। ನಮ್ಮ।

ಧರ್ಮ ಶ್ರದ್ಧೆಯು ಬಿಟ್ಟು ಪೋಗದೂ ॥ ಕಂಡ ॥ ೨ ॥ ಜಗದ ಜನತೆ ಯೊಂದುಗೂಡಿದೇ । ಇಂದು । ಮೊಗಲರಾಳ್ವಿಕೆ ದೇಶ ಹಬ್ಬಿದೇ ॥ ಅಗಣಿತ ಬಲರೊಳು ಹಗೆಯುಂಡಾ । ಬಾಳ್ವ । ಬಗೆಯು ಕಾಣೆನು ಛಲ ಬಿಡು ಕಂಡಾ ॥ ಕಂದ ॥ ೩ ॥.

॥ ಭಾಮಿನಿ ॥

ಬಿದ್ದು ಪರದಾಸ್ಯದಲಿ ಕೊಳೆಯುವ । ಶುದ್ಧ ಜೀವರನೆತ್ತಿ ಸಲಹಲು । ಸಿದ್ಧನಾಗಿಹೆ ಗುರುಕಟಾಕ್ಷದಿ ನಾಡ ಬಂಧನವಾ ॥ ಉದ್ಧರಿಸಲೊದಗವರು ಜೀವಿಸು । ತಿದ್ದರೇನ್ ಫಲವತ್ತಿ ಫಲದೊಳು। ಬಿದ್ದು ಹೊರಳುವ ಕ್ರಿಮಿಗಳಂದದಿ ವ್ಯರ್ಥ ಜೀವನವೂ ॥ ೧ ॥

ಧುರವ ಗೈವ ಸಮರ್ಥ ಧರಣೀ । ಶ್ವರರು ಮೌನದೊಳಿರಲು ನಮ್ಮೊಳು । ಹರಿವ ಕಜ್ಜವಿದಲ್ಲ ಮಗನೇ ವೇದಪಾಠಗಳಾ ॥ ಒರೆದು ತನು ಪೋಷಿಸಲು ಸದ್ಗುಣ । ಘೊರೆಯನಾಶ್ರಯಿಸುವದು ಸಮರವು । ಪರಮ ಶ್ರೇಯಸ್ಕರದ ಕಜ್ಜವಿದಲ್ಲ ವಿಪ್ರರಿಗೇ ॥ ೨ ॥

॥ ರಾ । ಭೈರವಿ । ಅಷ್ಟ ॥

ಮಾತೆಯ ಮರುಕವನು । ಕಾಣುತಲಿಂದ । ಜಾತಿ ವಿಪ್ರನ ಸುತನೂ ॥ ಮಾತೆ ನೀಸ್ವಾತಕೆ । ಭೀತಿಗೊಳ್ಳುವೆ ವಿಪ್ರ । ಖ್ಯಾತಿಯು ಬಲದಿನಾನೂ ॥ ಮಾತೆ ॥ ೧ ॥ ಗುರುವಿತ್ತ ಉಪದೇಶದೀ । ಪೋಗುತ ಜಗ । ದ್ಗುರುಗಳಮೃತ ಹಸ್ತದೀ ॥ ವರವಿದ್ಯಾ ತೀರ್ಥರಿಂಯುತಿ ದೀಕ್ಷೆಯಾಂತುನಾ । ಧರಿಸಿ ಪುನರ್ಜನ್ಮವಾ ॥ ೨ ॥ ಭಕ್ತಿಯಿಂ ತಪವಗೈದೂ । ವಿಪ್ರದ ತಪ । ಶ್ಶಕ್ತಿಯ ನೊಂದು ಗೈದೂ ॥ ಬತ್ತಿದ ಧರ್ಮಬುನಾದಿಯ ವೃಢಗೈದು । ಎತ್ತಿ ನಿಮ್ಮಯ ದಯದೀ ॥ ೩ ॥

॥ ವಾರ್ದಿಕ ॥

ಮಾನಪತಿ ಸಿನ್ಧುದರ ಸಂಜಾತನೆಂಬುವಭಿ । ಮಾನದಿಂ ನೈವೆಶಪಥವ ಮೊಗಲರಾಕ್ರಮಣ । ಕ್ಷೋಣಿಯೊಳಗಿಹ ಹಿಂದುಗಳ ಸಲಹೆ ಸ್ವಾತಂತ್ರ ಸಾಮ್ರಾಜ್ಯವನು ನಿರ್ಮಿಪೇ ॥ ತಾನುಡಿದ ಭಾಷೆ ಪುಸಿಯಾಗದಿದು ಗುರು ಕರುಣೆ । ತಾನಿಹುದು ಜತೆಯಾಗಿ ಕರುಣೆಸಾಶೀರ್ವಾದ । ಮಾನವಂ ಪಿಡಿಯು ಸಂಕಲ್ಪಕೆ ನಿಮಿತ್ತನಹ । ಮಾನವನ ಹೊಣೆಯು ವಿಧಿಗೆ ॥ ೧ ॥

॥ ರಾ ।ನವರೋಜು । ಏಕ ॥

ತಾಯೆ ನೀ ಕೇಳವ್ವಾ। ನೆಲ। ತಾಯಿಯು ಚಿಂತೆಯ ಕಳೆವಾ। ಕಾರ್ಯದಿ ಯತಿದೀಕ್ಷೆಗೆ ಪೊರಟನೊಳು। ಪ್ರಿಯದಿ ಕೊಡು ಶ್ರೀ। ಯುಸ್ವರದನುಮತಿ ॥ ತಾಯೇ ॥ ೧ ॥ ಜಗದ್ಗುರು ಮಾನೋಲ್ಲೈಸೀ। ಪರ। ಜಗದಾಂಬೆಯನು ಒಲಿಸೀ॥ ಮುಗುದೆಯೆ ದರುಶನ। ಕೊಡಗುವೆನೆಂದೆನೆ ತೆಗೆದಪ್ಪುತ ಹರಸುತ ಕಳುಹಿದಳೂ ॥ತಾಯೇ ॥ ೨ ॥

॥ ವಾರ್ದಿಕ ॥

ಜನನಿಯಿಂದನುಮತಿಯ ಪಡೆದವಳ ಬೀಳ್ಕೊಂಡು। ತನುವಿದು ಪರೋಪ ಕಾರ್ರ್ಯಾರ್ಥ ಕೊಡಗುವದೆಂಬ। ಘನತರದ ಉಲ್ಲಾಸದಿಂ ವಿರೂಪಾಕ್ಷನಿಗೆ ಮಣಿದು ಹಂಪೆಯ ಕಾಣುತಾ ॥ ಧನುಜದಲ್ಲಣ ರಘೂದ್ಭವನಾದ ರಾಮ ಚಂ। ದ್ರನ ಕ್ಲೇಶ ಕಳದ ಪಾವಿತ್ರ ಪಂಪಾ ಕ್ಷೇತ್ರ ॥ ವನ ಕಳೆದು ಋಷ್ಯ ಮೂಕವ ದಾಟಿ ಬರೆ ಮುಂದೆ। ಕಿಷ್ಕಿಂಧೆ ಕಂಗೊಳಿಸಿತೂ ॥ ೧ ॥

॥ ಭಾಮಿನಿ ॥

ಇದು ಕಣಾ ಶ್ರೀ ರಾಮ ಚಂದ್ರಗೆ। ಸದಮಲದ ಸತ್ಕಾರವಿತ್ತಿಹ। ಅದುಭುತದ ಗಿರಿ। ಬಳಿಯೊಳಿದೆ ನದಿ ತುಂಗ ಭದ್ರೆಯದೂ ॥ ಇದುವೆ ಭಾರತ ಸಂಸ್ಕೃತಿಯು ಪುನ। ರುದಿಸೆ ಪುಣ್ಯ ಸ್ಥಳವೆನುತ ಸದಯ। ನ ದೊಳು ಬಂದೆಯು ಸೇರಿ ಗುರುವರಗೆಲ್ಲ ವಿಸ್ತರಿಸೇ ॥ [illegible]

॥ ರಾ । ಮಧ್ಯಮಾವತಿ । ತ್ರಿವುಡೆ ॥

ಕೇಳು ಮಾಧವ ಶರ್ಮ ಹಿಂದೂ। ಜಾಲವನ್ನುದ್ಧರಿಸಿ ಸಲಹಲು। ವೇಳೆಯೊದಗಿದೆ ಸಾಧಿಸುತ ಜಯ। ಶೀಲನಾಗೂ ॥ ೧ ॥ ಯತಿಯ ದೀಕ್ಷೆಯ ಪಡೆದು ನೀನತಿ। ಹಿತದಿ ನಡೆ ಶೃಂಗೇರಿಯೊಳು ಭಾ। ರತಿ ಗುರುಗಳನು ಸೇರಿ ನಡೆವುದು। ಹಿತಗಳೆಲ್ಲಾ ॥ ೨ ॥ ಬಳಿಕ ಸನ್ಯಾಸನನು ಮಾಧವ। ತಳೆದು ಮಗುಳ್ಳೈತಂದು ತನ್ನಯ ನಿಳಯದಲ್ಲಿಹ ಜನನಿಗೆಲ್ಲವ। ತಿಳುಹಿ ಮುಂದೇ ॥ ೩ ॥ ಸಾರಿದನು ವರ ತುಂಗ ಭದ್ರೆಯ। ತೀರದಲಿ ತಪಸ್ಗೈದ ಸುಮನಸ। ನಾರಹಿತೆ ಭುವನೇಶ್ವರಿಯು ದಯೆ। ದೋರೆನುತಲೀ ॥ ೪ ॥ ಮೀಳೆ ಬಹುದಿನ ಕಳೆಯಲಾ ಶಿವ। ಜ್ವಾಲೆ ಹೆಚ್ಚಲು ಒಲಿದು ತ್ರಿಭುವನ। ಜಾಲವಂದಿತೆ ನಿಜ ಸ್ವರೂಪವ। ತಾಳಿ ನಿಲಲೂ ॥ ೫ ॥

॥ ರಾ । ಭೈರವಿ । ಝಂಪೆ ॥

ಕಂಡು ಭುವನೇಶ್ವರಿಯು । ದಂಡ ಪ್ರಣಾಮದೊಳು ॥ ದಿಂಡುಗೆಡದಮಿತ ಗುಣ । ಕೊಂಡಾಡುತಿರಲು ॥ ೧ ॥ ಸಾಕು ಬಿಡು ಮಗನೆ ತಪ । ಬೇಕಾದ ವರವೀವೆ ॥ ನಾ ಕರುಣಿಸಲು ಬಂದೆ । ನೀ ಕೇಳೆನಲ್ಕೆ ॥ ೨ ॥ ತಾಯೆ ಕೇಳೀ ಜಗದ । ಮಾಯೆಯನು ಕಳೆದು ಶಿವ ॥ ಜಾಯೆ ಸಂಪತ್ತ ಕೊಡು । ಪ್ರಿಯದಿಂದೆನಲೂ ॥ ೩ ॥ ಮತಿಯುತನೆ ಸಂಸಾರ । ಹಿತವನುರೆ ತ್ಯಜಿಸಿರ್ದ ॥ ಯತಿಯು ತಾ ಬಯಸುವನೆ । ಅತುಲ ಸಂಪದವಾ ॥ ೪ ॥ ದಾಸತ್ವದಿಂದ ಬಲು । ಘಾಸಿಗೊಂಡಿಹ ಧರ್ಮ । ಪೋಷಣೆಗೆ ಪ್ರಸತ್ತೊಂದು । ದೇಶನಿರ್ಮಿಸಲೂ ॥ ೫ ॥

॥ ರಾ । ಕಾಫಿ । ಅಷ್ಟ ॥

ಧನ್ಯನಾದೆಯೊ ಶರ್ಮ ನೀನೂ । ಆಶೆ । ಪೂರ್ಣವಪ್ಪುದು ಕೇಳು ಮನದಿಚ್ಛೆಯನ್ನೂ ॥ ಚಿನ್ನದ ವೃಷ್ಟಿಯಿಂ । ದೊದಗಿಪೆ ರಾಜ್ಯದ । ಉನ್ನತಿಯೊದಗಲಿ । ಎನ್ನ ಕಟಾಕ್ಷದೀ ॥ ಧನ್ಯ ॥ ೧ ॥ ತೆರಳು ಶೃಂಗೇರಿ ಮಠದೊಳೂ । ನಿನ್ನ । ಬರವ ಹಾರೈಸುತ್ತಲಿಹರು ಸ್ವಾಮಿಗಳೂ ॥ ಗುರು ಪಟ್ಟವದರ ಸ್ವೀ । ಕರಿಸಿ ನೀನಿರೆ ಮತ್ತೆ । ಬರುವುದು ಸಮಯವು । ನೆನೆದಿಹ ಕಾರ್ಯಕೇ ॥ ಧನ್ಯ ॥ ೨ ॥ ವಿಧಿಚಿತ್ತದಂತೆ ನಿನ್ನಿಷ್ಟೀ । ಎಲ್ಲ । ಪದವಗಿ ಸೇರುವುದಯ್ಯ ಬಹು ಸುಲಭದಲೀ ॥ ಸದಮಲ ಕೀರ್ತಿ ಸುಸ್ಥಿರವಾಗಿ ಇರಲೆಂದು ॥ ಶರಣನ ಹರಸುತ್ತ । ಮರೆಯಾಗಲವಳತ್ತ ॥ ಧನ್ಯ ॥ ೩ ॥

॥ ವಾರ್ಧಿಕ ॥

ಬಳಿಕಾದ ಕಥನ ಕೇಳ್ ಸಾಧನಾಚಾರದೆಯು । ನೆಲೆವೀಡು ಶೃಂಗೇರಿಗೈತರಲು ಜಗನ್ಮಾತೆ । ನೆಲೆಯಂತೆ ಗುರುಪೀಠವಾಳಿದು ವಿದ್ಯಾರಣ್ಯನೆಂದಾಯ್ತು ಪೆಸರು ಬಳಿಕಾ ॥ ಸುಲಲಿತದ ತಪ ಮಹಿಮೆಯಿಂದ ಕೀರ್ತಿಯು ಬೆಳಗಿ । ಸಲೆ ವಿಸ್ತರಿಸುತಿರಲು ಡಿಲ್ಲಿಯೊಳು ಮಹಮ್ಮದನು । ತಿಳಿದ ರಾಜದ್ರೋಹಿಯನುಜ ಹಿಂದೂ ಜನರ । ಬಳಿಯು ಸೇರಿದನೆನ್ನುತಾ ॥ ೧ ॥

॥ ರಾ । ಮಾರವಿ । ಏಕ ॥

ಘಡ ಘಡ ಹುಡುಗನು । ಕಡು ಕಲಿ ಪೀನಂ । ಪಡೆ ಸೇರುತಲೆನ್ನಾ ॥ ಕಡುಹುತನಂಗಳ । ಕೆಡಿಸಿದ ದ್ರೋಹನ । ತಡೆಯುವುದೆಂತೀಗಾ ॥ ೧ ॥ ವೃದ್ಧನು

ಧರಣಿ । ಶುದ್ಧ ಚರಿತನವ ಪ । ಬುದ್ಧಿ ಜ್ಞಾನಗಳೂ ॥ ಇಷ್ಟವನಾವರಿ । ಬದ್ಧವಿ ರೋಧದಿ । ಯುದ್ಧವ ಬಯಸುವನೇ ॥ ೩ ॥ ಅರಿತಿಹೆನೆಂದಿಗು । ಮರುಕದೆ ಹಿಂದೂ । ಧೊರೆತನ ಭಾರತದೀ ॥ ದೊರೆಯದು ಶಾಂತಿಯು । ಎನುತಾ ದ್ರೌಪದಿ । ಕರೆದು ಇಬ್ರಾಹಿಮನಾ ॥ ೪ ॥

॥ ರಾ । ಕೇತಾರಗೌಳ । ಝಂಪೆ ॥

ಬಾರಯ್ಯ ಸೇನಾಪತಿಯೇ । ಯವನ ಕುಲ । ಶೂರವರ ಸರದಾರನೇ ॥ ಭಾರತದಿ ತೆಂಕುದೆಸೆಯಾ । ಗಜಗೊಂದಿ । ಧಾರುಣಿಯ ನಾಳುತಿರುವಾ । ಬಾರಯ್ಯಾ ॥ ೧ ॥ ಹಿಂದು ದೊರೆತನವನಿಳುಹೂ । ಸಿಕ್ಕಿದರೆ । ಬಂಧಿಸುತಲಿಲ್ಲಿ ಕಳಹೂ । ಒಂದು ಕಾಸುಳಿಯದಲ್ಲೀ । ಸಂಪದವ । ತಂದು ತೋರುವುದು ಇಲ್ಲೀ । ಬಾರಯ್ಯಾ ॥ ೨ ॥ ಎನುತಲಪ್ಪಣೆಯ ಕೊಡಲೂ । ಇಬ್ರಾಹಿಂ । ಘನಹರುಷದಿಂ ಪೊರಡಲೂ । ಮನದೊಳುಬ್ಬುತ ಮಹಮ್ಮದಾ । ಇರುತೀರ್ದ । ನೆಣಿಸಿ ಬಹ ಸೌಭಾಗ್ಯವಾ ॥ಬಾರಯ್ಯಾ ॥ ೩ ॥

ರಾ । ತುಜಾವಂತು । ಮಟ್ಟೆ ॥

ವೀರನೆನಿಪ ಖಾನ ತನ್ನ । ಭೂರಿ ಸೇನೆಯೊಡನೆ ಬರುವ । ವಾರತೆಯನು ಬಂದು ಗುಪ್ತ । ಚಾರರರುಹಲೂ । ಧಾರುಣೀಶ ಬಳಿಕ ತನ್ನ । ಸೇರಿದವರ ಕರಸುತೆಂಗ । ಘೋರಿ ಜಯವ ಗಳಿಸೆ ಸಮಯ । ಬಾರಿ ಬಂದಿದೇ ॥ ೧ ॥ ಶತ್ರು ನದಿಯ ದಾಟಿ ಪುರವ । ಮುತ್ತಬಿಡದೆ ಮಧ್ಯ ಪಥದಿ । ಸುತ್ತುವರಿದು ಸಮರಗೈದು । ಕೀರ್ತಿಯಳಿಪುದು ॥ ಸತ್ತುದಿಂದ ಕಾದೆ ಜಯವು । ಸತ್ತಡದುವೆ ವೀರ ಸ್ವರ್ಗ । ಪೃಥ್ವಿ ಸ್ಥಿರವಿದಲ್ಲವೆನುತ । ಮತ್ತೆ ಭೂಪನೂ ॥ ೨ ॥

॥ ವಾರ್ಧಿಕ ॥

ಧಾರುಣೀಶ್ವರ ಬಳಿಕ ಬಹದ್ದೀನ ಖಾನನನು । ದ್ವಾರ ಸ್ವಮುದ್ರೆಯೊಳಗಿಹುದೆನುತ ಕಳುಹಿ ಭಂ । ಡಾರದೊಳಗಿಹ ಸಕಲ ನಿಧಿಯನು ರಹಸ್ಯದೊಳು । ಸೇರಿಸುತ ನಿಶಿಯ ಕಳೆದೂ ॥ ವಾರಿಜಾಪ್ತನ ಉದಯ ಕಾಲದೊಳು ನಿತ್ಯ ವಿಧಿ । ತೀರಿಸುತ ರಣ ಕಣಕೆ ಪೊರಡೆ ಪದ್ಮಾವತಿಯು । ನಾರಿ ಸೈನ್ಯದ ಜತೆಯೊಳೆಂದು ಜಯ ಘೋಷದಿಂ ರತ್ನದಳವಂ ಪೊಕ್ಕಳೂ ॥ ೧ ॥

ರಾ । ಮಾರವಿ । ಏಕ ॥

ಸೇನೆಯನೊಡಗೊಂಡಾಸದಿ ತೀರದಿ । ದಾನವ ಮಾರ್ಬಲವಾ ॥ ಪಾಸಿಗೆ

ಹರಿಹರನೊಡಗಲಿಬ್ರಾಹಿಮು । ತಾನೆಂದನು ಮುಳಿದೂ ॥ ೧ ॥ ಅರೆಲೊ ಹಿಂದೂ ಪ್ರೇರನೆ ನಮ್ಮೊಳು । ಹೋರುವಡಾತುರವಾ ॥ ತೋರುತಲಿಹ ಸೇನಾರಿನಲೊರದನು । ವೀರಾವೇಶದೊಳೂ ॥ ೨ ॥ ಮಂದಮತಿಯೆ ಗಜ ॥ ಗೊಂದಿಯ ನಾಯಕ । ವೃಂದದಿ ಭೂಮಿಪನಾ ॥ ಬಂಧುವು ಹರಿಹರನೆಂಬರು ಜಗದೊಳು । ಬಂದವ ಸೇನ್ಯಾರೂ ॥ ೩ ॥ ಶ್ರೇಷ್ಠರು ಭಾರತದಲಿ ಯವನರ ವ್ರಜ । ಸಟ್ಟ ಮಹಮ್ಮದನಾ ॥ ಪಟ್ಟದ ಸೇನಾಧಿಪನಬ್ರಾಹಿಮು । ದಿಟ್ಟನನರಿತಿಹೆಯಾ ॥ ೪ ॥ ಹಿಂದು ಕುಲಜರೆಮ್ಮಧಿಕಾರದೊಳೇ । ಹಿಂದುಸ್ಥಾನವಿರೇ । ಬಂದು ಸ್ವಯೂಥ ರಕ್ಷಾಗ್ರವ ಬಿತ್ತಿದ । ಮಂದಿಗಳ್ಳೆಸೇವ್ರೋ ॥ ೫ ॥

॥ ರಾ । ಕೇತಾರಗೌಳ । ಝಂಪೆ ॥

ಎಲೆ ಹಿಂದುಕುಲಜಾತನೇ । ನಿಮ್ಮೊಳಿಹ । ನೆಲೆಯನಾನರಿಯುವನೇ ॥ ಕಲುಮರನ ಮೂರ್ತಿಗಳನೂ । ದೇಗುಲದಿ । ನಿಲಿಸಿ ಪೂಜಿಸುವಿರಿನ್ನೂ ॥ ೧ ॥ ಪರಿಪರಿಯ ಗೊಂವಲದೊಳೂ । ಸಿಲುಕಿತರ । ಹರಿಪ ಮನವಂದಿಡೆಯೊಳು ॥ ಸ್ಥಿರವಾಗಿ ನಿಲೆ ಮೂರ್ತಿಯಾ । ಪೂಜೆಯಿಂ । ದಿರುವ ಬಗೆ ನೀನರಿಯೆಯಾ ॥ ೨ ॥ ಆದಿದೈವವ ಹೇಳಿಸೀ । ತಮಗೆ ಬೇ । ಕಾದ ಕೆರ ವೇಷರನಿರಿಸಿ । ಬೂದಿ ಬಳಿದಾತ ಶಿವನೂ । ರಾಮ ಕೃ । ಷ್ಣಾದಿಗಳು ದೇವರಿನ್ನೂ ॥ ೩ ॥ ದೇವರಲ್ಲವರು ನಮಗೇ । ಆದಿಗುರು । ಭಾವದಿಂದಿಹೆವು ಹೀಗೇ ॥ ಈ ವಿಧವ ಜರೆದು ನುಡಿಯೇ । ತತ್ವಲದಿ । ಸಾವುಬಹುದೆಂಬುದರಿಯೆ ॥ ೪ ॥

॥ ಭಾಮಿನಿ ॥

ಹಿಂದು ಮುಸಲ್ಮಾನಾದಿ ವೈರವು । ಇಂದು ಜನಿಸಿಮುದಲ್ಲ ಮೊದಲೇ । ಕೊಂದು ಮತ ವಿಸ್ತರಿಸಿ ಮೆರೆದಿಹರೆಮ್ಮ ಪೂರ್ವಜರೂ । ಸಂದವರನೆಲೆಯನು ಕರಿಸಿನಾ । ವಿಂದು ಕುಲ ಪದ್ಧತಿಯೊಳಿಹೆನೆನ । ಲಂದು ರೋಷದಿ ತುಮುಲು ಯುದ್ಧವದಾಯ್ತು ವೀರರಿಗೇ ॥ ೧ ॥

॥ ರಾ । ಪಂಚಾಗತಿ । ಮಟ್ಟೆ ॥

ಭರಿತ ರೋಷದಿಂದ ಸಮರ । ಹರಿದುದೆಂಟು ದಿನವು ಹಿಂದೂ । ಪೊರೆಯು ಭಾಗ್ಯ ರವಿಯ ಕಾಂತಿ । ಸರಗಿದಂತಿರೇ । ದುರಳ ನೈಂತರಭ್ಯುದ [illegible] । ಪರಮಪಾಪ [illegible] ಬಿನಗೆ । [illegible] ರದಿ [illegible] ಹಿಡಿದು ಜಯದು

ತರುಣಿ ನಿಂದಿರೇ । ಭರಿತ ॥ ೧ ॥ ಪುರದ ಕೋಟೆಯುಳಿದು ದೂರ । ಹೊರ ಪಳಿಯುವ ಕಣದಿ ಬುಕ್ಕ । ಹರಿ ಹರಾದಿ ಶೂರರೆಲ್ಲ । ಪರಿಬವೆಸಗುತಾ । ಧುರಧೀರರನ್ನು ಗೆಲಿವಪಾಯ । ವರಿಯದಿರಲು ತೆರಳಿತಾಗ । ಧುರಳ ಸೇನೆ ಯರ್ಧ ಭಾಗ । ಹರಿದು ಕೋಟೆಗೇ ॥ ೨ ॥ ಆನೆ ಕುದುರೆ ಮಲ್ಲ ಯುದ್ಧ । ಬಾಣದೆಸುಗೆಯಿಂದ ಹೀನದೂ ಸೇನೆ ನಾಶವಾಗೆ ಯವನ । ತ್ರಾಣ ಕೆಟ್ಟಿತೂ । ಮಾನವಂತ ದೇವರಾಯ । ಜಾಣ ರಾಮ ರಾಯರೆಲ್ಲ । ಹೀನ ಶತ್ರುರೆನಿಸಿಯು ಗತ । ಪ್ರಾಣರಾಗಲೂ ॥ ೩ ॥ ಸೆರೆಯ ಪಿಡಿದು ದುರ್ಗವೇರಿ । ಅರಸಗಜಪ । ನೇರಿ ಬರುವ । ಪರಿಯ ಕಂಡು ಯವನ ತಡೆದ । ನುರುತ ರೋಗ್ರದೀ ॥ ೪ ॥

॥ ರಾ । ಸಾರಸ್ವ । ತ್ರಿವುಡೆ ॥

ಸೇನೆಲಾ ಗಜ ಗೊಂದಿಯಾಳುವ । ಹೀನ ಕುಲದವನಿವನು ನಿನ್ನ । ಸ್ಥಾನದೊಳಗಡಗಿರುವ ಬಹುದೀ । ಮಾನನೆಸ್ಟೀ ॥ ೧ ॥ ಸ್ವಾರ್ಥ ಬಗುಳಲಿವೇಕೆ ನಮ್ಮಯ । ಕ್ಷಾತ್ರಿ ಧರ್ಮಾದಿ ಕುಲದ ನೆಣಿಕದೆ । ಅರ್ಥದನು ಕಲಿಕಿದತೆ ಪುರವನು ಮುತ್ತಲೀಕೇ ॥ ೨ ॥ ದೋಹಿಯೊಡನೈ ತಂದು ನಿನ್ನಯ । ದೇಶವಪ್ಪಿಸಿ ದಾಸನಾಗಿರೆ । ಪೋಷಿಸುವೆನಲ್ಲದಡೆ ನಿನ್ನದು ನಾಶವಹುದೂ ॥ ೩ ॥ ಬಲ್ಲೆ ನುಡು ನಿನ್ನಯ ಮಹಮ್ಮದ । ಖುಲ್ಲ ತನಗಿನ್ನೇನು ಹಿರಿಯದ । ಕೊಲ್ಲಿಸುತ ಸುಲ್ತಾನನೆನಿಸಿದ । ಮಲ್ಲತನವಾ ॥ ೪ ॥

॥ ರಾ । ಭೈರವಿ । ಅಷ್ಟ ॥

ಪಾತಕಾಗ್ರಾತಕೆಂದೂ । ಶಸ್ತ್ರಾಸ್ತ್ರದೊ । ಳಾತಗೆ ಬಡಿಯಲೆಂದೂ ॥ ಬಾತಿಯೊಳಿಬ್ಬರು । ಕಾದುತ್ತಲಿರೆ ಶತ್ರು । ಪ್ರಾತನೃಪನ ಮುತ್ತಿತೂ ॥ ೧ ॥ ಹಲವು ದುರಾತ್ಮರೊಳೂ । ಓರ್ವನೆ ಕಾದಿ । ಬಲಗುಂದುವನಿತರೊಳೂ । ಖಳರು ವಂಚನೆಯಿಂದ । ನಿಲುತ ಹಿಂಗಡೆಯೊಳು । ಕರಗಳ ಖಂಡಿಸಲೂ ॥ ೨ ॥ ಹಸ್ತಹೀನನ ರುಂಡವಾ । ಇಬ್ರಾಹಿಮ । ಕತ್ತರಿಸುತ ಖಡ್ಗವಾ । ಎತ್ತುತಲಿರಲು ಮಹಾಂಕಾಳಿಯಂದದಿ । ಮತ್ತೆ ಪದ್ಮಾವತಿಯೂ ॥ ೩ ॥ ಘಡದು ರಾತ್ಮನೆಯುದ್ಧದೀ ಹಲವರೊಂದು । ಪಡೆಗೂಡಿ ಮೋಸದಲೀ । ಕಡುಗಲಿಯಂತೆ ಕಾದಿದ ವೀರನೋರ್ವನ । ಮಡುಹಿದೆ ನುಡು ನಿನ್ನನೂ ॥ ೪ ॥ ಯಾರು ಬಾಲಕ ನಿನ್ನೊಳೂ ಕಾದಲು ಮನ । ಬಾರದು ಸತಿಯರೊಳೂ । ಸೇರಿ ತಲ್ಲಣಿಸಿದ್ದು । ನಾರನಾಟಿಪ ಬಿಟ್ಟು । ಹೋರಾಡಿ ದಣಿಯಲೀಕೇ ॥ ೫ ॥ ನಿನ್ನ ಪ್ರೇಲುವ ಸ್ತ್ರೀಯರೂ । ನಮ್ಮಯ ಪೊರೆ । ಯನ್ನು ಬಯಸುತಿಹರೂ । ನಿನ್ನ ಜನಕ

ನಿಂದು | ಅಳಿದ ಮೇಲ್ ಯುದ್ಧವ | ನೆಣ್ಣಸಲ್ಯಾಕೆ ನೀನೂ ೫ || ಮುಳಿದು ಪದ್ಮಾವತಿಯೂ | ಕಠಾರಿಯ | ಘಳಿಲನೆ ಬೀಸಲಂದೂ || ಬಲವಂತನೇರ್ದಷ್ಟ | ಇಳೆಯೊಳು ಬೀಳಲ್ಕೆ | ಕೆಳಗುರುಳಿದ ಖಾನನೂ || ೬ ||

| ವಾರ್ಧಿಕ |

ಪೊಡವಿಯೊಳು ಬಿದ್ದು ಬಸವಳಿದ ಖಾನನ ಎದೆಯೊ | ಳಿಡಗಾಲ ನಿಟ್ಟಿಂದಳೆಲವೊ ನಿನ್ನಯ ತಲೆಯ | ಕಡಿಯು ದುಳುಹುವೆನೆಲು ಪಿಡಿ ಕಠಾರಿಯ ನಿಂದು | ತೊಡಗು ಕಾಳಗಕೆನ್ನಲೂ || ಘುಡು ಘುಡಿಸಿ ಖಾನ ರೋಷದೊಳೆದ್ದು ವಾಹನವ | ಕಡೆಗಣಿಸಿ ಕತ್ತಿ ಕಾಳಗಕೊಡಗೆ ನೃಪಕುವರಿ | ಪಡೆಸಮಸ್ತವು ಕೌತುಕವ ಪಡಲು ಧೂರ್ತನೊಳು | ನಡೆಸಿದಳ್ ಕಾಳಗವನೂ || ೧ ||

|| ಭಾಮಿನಿ ||

ತರುಣಿ ಕರ ಕೌಶಲದಿ ಖಾನನ | ಶಿರವ ಧರೆಗಿಳುಹಲ್ಕೆ ಸತಿಯುತು ಜೊರಿಕುಮಾರಿಯನತ್ತ ಕರೆದೊಯ್ಯಲ್ಕೆ ದುರ್ಗದೊಳೂ || ಧುರುಳರೊಳುಸೆಣಸುವರ ಕಾಣದೆ | ನೆರೆಸುಲಭದಿಂದಾಯ್ತು ಜಯವೆಂ | ಬುರುತರಾನಂದ ವಲಿಯುವನ ಧ್ವಜವನೇರಿಸಲೂ || ೧ ||

ಧುರದೊಳಪಜಯವಾದ ವಾರ್ತೆಯ | ನರಿತು ಹಿಂದು ಸುಮಂಗಲಿಯರತಿ | ಹರುಷದಿಂ ದುರ್ಗದೊಳು ಯಜ್ಞೇಶ್ವರನ ನುರಿಗೊಳಿಸೀ || ವರ ಸುಹಾವೇದೋಕ್ತದಿಂದಾ | ಚರಿಸಿ ಜೋಹಾರವನು ಮುತ್ತಿದ | ದುರುಳರಿಗೆ ಕೌತುಕವದೆಂದೆನಿಸಿದರು ಜಗವರಿಯೇ || ೨ ||

|| ದ್ವಿಪದಿ ||

ಮತ್ತೆ ಯವನರು ಪುರವ ಗೆಲಿದ ಹರುಷದಲೀ | ಮುತ್ತಿದರು ಪಟ್ಟಣವ | ಕೇರಿ ಕೇರಿಯಲೀ || ೧ || ಮನೆಗಳನು ಪೊಗುತ ಜನ ನಿಕರವನ ತರಿದೂ | ಮನಕೊಪ್ಪಿದ ಮಿತ ವಸ್ತುಗಳ ನೆರೆಸುಲಿದೂ || ೨ || ಅರಮನೆಯೊಳೆಲ್ಲ ಬಹಿಷ್ಣಿಸನು ಅರಸಿ || ದೊರೆಯದೆ ಜಮಾಲನು | ಹೊಯ್ಯಳಕೆ ತಳುಹೀ || ೩ || ಭಂಡಾರದೊಳು ರಾಜಸಂಪದವ ಸಿಗದೇ | ಕಂಡ ಕಂಡವರ ಕೊಂದರು ಕೇಳಿ ಬರಿದೇ || ೪ ||

|| ರಾ | ಸಾಂಗತ್ಯ | ರೂಪಕ ||

ಪುರುಳರೀಪರಿಯಿಂದ | ಪುರವ ತವೊಕ್ಕಸೈದು | ಮೆರೆಯುತ್ತಲಿರಲು ದುರ್ಗದೊಳು || ಸೆರೆಯ ಸಿಕ್ಕದೆ ತಪ್ಪಿ | ಹರಣವ ಕಾಪಾಡಿ | ಹರಿಹರ ಬುಕ್ಕ ನಾಯಕರೂ || ೧ || ವೇಶವ ಮರೆಮಾಡಿ | ಹೇಸಿ ಕುರುಬರಂತೆ | ದೇಶದ ಗಡಿಯನುತ್ತರಿಸೀ || ನಾಶವಾಗಿಹ ರಾಜ್ಯ | ದಾಸೆಯನುರೆ ಬಿಟ್ಟು | ಕ್ಲೇಶದಿ ಗಿರಿವನಾಂತರದೀ || ೨ || ದೊರೆ ಜೀವವಿತ್ತ ಸಂ | ಗರದಿ ಮಿಕ್ಕವರೆಲ್ಲ | ಸೆರೆಸಿಕ್ಕಿ ದಿಲ್ಲಿ ಸಾರಿದರೂ || ತರಳೆ ಪದ್ಮಾವತಿ ನಾದಳೆಂಬುದ | ನರಿಯ ಬಾರದೆಪ್ಪು ಅಯ್ಯೊ ವಿಧಿಯೇ || ೩ || ಪೃಥ್ವಿಪಾಲಕ ಹಿಂದೆ ಮತ್ತ ಕಾಶಿನಿಯನ್ನು | ಹಸ್ತದೊಳಿತ್ತಿಂವ ನುಡಿಯೂ || ವ್ಯರ್ಥವಾಯಿತು ಜೀವ | ವಿರಲೇನು ತರುಣಿಯು | ವೃತ್ತಾಂತ ವರಿಯದಾಯ್ತಿನ್ನೂ || ೪ || ಕನ್ಯೆಯು | ನೃಪನ ಪುತ್ರನ್ಯರ ಸೇರಿದ | ತನ್ನ ತಾಯ್ನಾಡ ದುರ್ವಿಧಿಯಾ || ಅನ್ನ ನೀರಿಲ್ಲದೆ ಬನ್ನ ಬಡುವ ಜನ | ರನ್ನು ಚಿಂತಿಸುತ ಸಾಗಿದರೂ || ೫ ||

|| ವಾರ್ಧಿಕ ||

ತರಹರಿಸುತಪರಿಂತು ಕೆಲವು ಮಾಸಾಂತರದಿ | ತೆರಳಿದರು ಬಲ್ಲಾಳ ಪುರಕೆ ಸುತ್ತಲ್ಲಿ ದು | ಷ್ಕರಣೆಗಳು ಮುತ್ತಿ ಬಹದ್ದೀನನು ಬಂಧಿಸುತ ಲೀಳದೀರ್ಘ ಹದನವರಿತೂ || ಮರುಗುತಿರಲಲ್ಲಿ ವಿದ್ಯಾರಣ್ಯ ಸ್ವಾಮಿಗಳ | ಪರ ತಪೋ ಮಹಿಮೆಗಳ ಕೇಳಿ ಬೆರಗಾಗಿ ನಮ | ಗಿರುವುದೊಂದೇ ಗುರುಗಳಧ್ಯಾತ್ಮ ಶಕ್ತಿ ಬಲ | ವೆನುತ ಪೊರಟೈತಂದರೂ || ೧ ||

ಇತ್ತ ಕೇಳಾಸೆಗೊಂದಿಯು ರಾಕ್ಷಸೀ ಪತನ | ವೃತ್ತಾಂತವೆಲ್ಲ ಪಸರಿಸಿತು ಶೃಂಗೇರಿಯೊಳ | ಸರ್ಥವನು ಸುಜ್ಞಾನದಿಂದ ವಿದ್ಯಾರಣ್ಯರರಿತು ಸಾಯಣಗೆಂದರೂ | ಸತ್ಯಮಂಗಲೆ ದೇವಿಯಾದೇಶ ಕಾಲವಿದು | ಹತ್ತಿರವದಾಯ್ತು ಕುಳಿತಿನ್ನು ಫಲವಿಲ್ಲೆಂದು | ಸತ್ವನಿಧಿಯೋರ್ವನೇ ಮಠವನುಳಿದೈತಂದ | ಚಿತ್ತದಿ ವಿಕಲ್ಪರಂತೇ || ೨ ||

ಪಥಪಿಡಿದು ಬರುತಿರಲೊಂದು ವೃಕ್ಷದ ಬುಡದಿ | ಅತಿ ಬಲಾನ್ವಿತರೀರ್ವರೊರಗಿರಲು ಶಿರದ ಬಳಿ | ಅತಿ ಘೋರವೆನೆ ಹೆಡೆಯನೆತ್ತಿದ ಮಹೋರಗಂ | ಹಿತವಾಗಿ ಕಡು ಬಿಸಿಲಿನಾ || ಹತಿಯವರ ವದನಕೊದಗದೆ ಕಾವ ವಿಸ್ಮಯದ | ಗತಿಯನಾಲೋಚಿಸುತ ಕುಲು ಮನುಜರಲ್ಲಿವರು | ಅತಿಶಯ ಮಹಾತ್ಮರೆಂದೆಚ್ಚರಿಸೆ ಕಾಣುತ್ತ | ಯತಿ ಪಾದದೊಳು ಮಣಿದರೂ || ೩ ||

॥ ರಾಗ । ಕಾಂಬೋಧಿ । ಝಂಪೆ॥

ಯಾರು ನೀವೆತ್ತ ಕಡೆ। ಸಾರುವವರೆನಲು ಪದ। ಸಾರಸಕೆ ತಲೆವಾಗುತವರೂ ॥ ದೂರ ದೇಶದ ಹೀನ। ಕುರುಬ ಕುಲಜರು ನಾವು। ದಾರಿಗರು ಬಂದೆವೀ ಕಡೆಗೇ ॥ ೧ ॥ ಕತ್ತಲೆಯು ಜ್ಯೋತಿಯನು। ಮುತ್ತಲಹುದೇ ನಿಮ್ಮ। ಕೃತ್ರಿಮದ ಕುರುಬರಾಕೃತಿಯೂ ॥ ಚಿತ್ತದೊಳಗರಿಯದವನಲ್ಲ ಬಂದಿಹ ವ್ಯಥೆಯ। ವಿಸ್ತರಿಸಿರೆನಲು ಕೈ ಮುಗಿದೂ ॥ ೨ ॥ ಜೀಯ ತಾವಾರೆಂಬುದರಿಯೆ ನಾವು ದರಿದ್ರ। ರಾಯ ಕುಲದವರು ನಾಯಕರೂ ॥ ಆಯವನರೆಮ್ಮ ರಾಜ್ಯವ ಸೆಳೆದು ಸಕಲರನು। ಈಯವಸ್ಥೆಗೆ ತಂದರೆನಲೂ ॥ ೩ ॥ ತಿಳಿದಿಹೆನು ಜಂಬುಕೇಶ್ವರನಳಿವ ಪುತ್ರವನ। ಕುಲಪುತ್ರಿ ಏನಾದಳೆನುವಾ ॥ ನೆಲೆಯನರಿತರೆ ಪೇಳ್ವೆದಿನ್ನು ನೀವೆತ್ತ ಕಡೆ। ನೆಲಸುವವರೆಂದೆನಲು ಕೇಳ್ದು ॥ ೪ ॥ ದಾರಿತೋರುವರು ವಿದ್ಯಾರಣ್ಯರೆಂದೆನುತ। ಸಾರುತಿಹೆವಲ್ಲೆ ಗೆಂದೆನಲೂ ॥ ಧೀರರಿರ ನಾನೆ ವಿದ್ಯಾರಣ್ಯ ಶಿವೆದಯದಿ। ಸೇರಿದಿರಿ ಬಂದು ಎನ್ನೆಡೆಗೇ ॥ ೫ ॥

॥ ರಾ । ಕಾಫಿ । ಏಕ ॥

ಕೇಳಿ ಹರಿಹರ ಬುಕ್ಕ ನಾಯಕರೂ। ನಾನೆಸೆದ ಕಾರ್ಯಕೆ। ವೇಳೆಯೊದಗಿದೆ ಸುಕೃತ ಶಾಲಿಗಳೂ ॥ ಶೀಲ ಸಿಧಿಗಳೆ ತಪ ಬುನಾದಿಯು । ಮೇಲೆ ಬಲಿವ ಸ್ವತಂತ್ರ ರಾಜ್ಯಕೆ ॥ ಮೇಲೆನಿಪ ಸುಸ್ಥಳವನರಸಲು। ಏಳಿ ಹೋಗುವ ನಡೆಯಿರೆನ್ನಲು ॥ ಕೇಳಿ ॥ ೧ ॥ ಅಲ್ಲಿಯೊಂದೆಡೆ ಬೇಟೆ ನಾಯುಗಳನೂ। ಮೊಲವೊಂದು ಪೀಡಿಸಿ । ಕೊಲ್ಲುತಿರೆ ಕಂಡದನು ಯತಿ ವರನೂ ॥ ಬಲ್ಲಿದನೆ ಇದು ವೀರ ಭೂಮಿಯು। ಇಲ್ಲಿನವ ಸಾಮ್ರಾಜ್ಯದುದಯಕೆ ॥ ಸಲ್ಲಲಿತ ಸುಸ್ಥಳವಿದೆನ್ನುತ। ಕಲ್ಲನಿಟ್ಟವರ್ಗೈದೆ ಮುಂದಕೆ ॥ ಕೇಳಿ ॥ ೨ ॥

॥ ಭಾಮಿನಿ ॥

ಇತ್ತರಿವರೊಗ್ಗಿನಲಿ ಮುಂದಿನ। ಕೃತ್ಯಗಳ ನೆರೆ ಚಿಂತಿಸುತ್ತಿರ। ಲತ್ತ ದೂರ್ತ ಜವಾಲಿ [illegible]ಶ್ವರನ ಸಮ್ಮುಖದೀ ॥ ಮುತ್ತಿ ಕೈಸೆರೆ ಪಿಡಿದು ತಂದಿಹ। ಸತ್ವಸಿಧಿಗಳನೊಪ್ಪಿಸಿಯೆ ಕೃತ। ಕೃತ್ಯತಾನೆನುವಂದದಲಿ ವಿವರಿಸಿದನೆಲ್ಲವನೂ ॥ ೧ ॥

॥ ರಾಗ। ಮಧ್ಯಮಾವತಿ । ಏಕ ॥

ಚಿತ್ತ[illegible] [illegible] [illegible] । [illegible]ತ್ತಾಂತ ಪೇಳ್ವೆನೆಮ್ಮೊಳು ರಾಗೈದಾ । [illegible] [illegible] ಕೊಂದು ಪ್ರಮುಖರಾ। ಅಸ್ತ್ರ[illegible] ತಂದೆ

[illegible] | [illegible] | [illegible] ಕಸೂ | [illegible] [illegible] | [illegible] ಬಲ್ಲಾಳ [illegible] | [illegible] ರಾಜಾಗಾರವೆಲ್ಲ ಶೋಧಿಸುತಾ | ಆ ಸಂಪತ್ತಿನ [illegible] ನೋಡಿ [illegible] ಎಂದು [illegible] | [illegible] ನನುಜನ ಹನನಾ ॥ ೬ ॥

॥ ವಾರ್ಧಿಕ ॥

[illegible] | [illegible] ಲಿಟ್ಟು [illegible] | ಪಟ್ಟವನು [illegible] ವಿಸ್ತರಿಸಿದ [illegible] ॥ [illegible] | [illegible] ॥

॥ ಭಾಮಿನಿ ॥

ನೋಡಿದನು [illegible] | [illegible] | [illegible] ॥ [illegible] | [illegible] | [illegible] ದಲಿ ಪರಲೋಕದ ಸುಯಾತ್ರೆಯನೂ ॥ ೧ ॥

ಅಲ್ಲಿ [illegible] | [illegible] | [illegible] | [illegible] ಪಿಶಾಚರ | [illegible] ॥ ೨ ॥

[illegible] | ತ್ರಿನ್ನಗತಿ [illegible] ತಂತ್ರವಸ್ತ್ರದು | [illegible] | [illegible] ॥ ೩ ॥

ಹಿಂದುಗಳ [illegible] | [illegible] ರಾಜ್ಯಗ [illegible] ॥

ಕುಂದಿಸುತ ಜ್ಯೋತಿಷ್ಯಗಣಿತಾ। ಸಂದ ಕಲೆಗಳ ಕಡಿಸಿದಲ್ಲದೆ । ಬಂಧು
ಸ್ನೇಹವನೆಣಿಸಿದುಂಟೇ ಖಾನ ನೀನೆಂದಾ ॥ ೪ ॥

ಪುಣ್ಯಬಲವ್ರೋ ನಿನ್ನ ಹಿರಿಯರ। ಪುಣ್ಯಬಲವ್ರೋ ಹಿಂದುಗಳ ಕಾ
ರ್ಪಣ್ಯ ಫಲವ್ರೋ ಭರತ ದೇಶದ ದುರ್ವಿಧಿಯ ಫಲವ್ರೋ॥ ಗಣ್ಯ ನೀನೆ
ನಿಸಿದರು ಪ್ರಜೆಗಳ। ವನ್ಯ ಪಶುಗಳ ತೆರನೊಳಲ್ಲದೆ। ಮಾನ್ಯತೆಯನಿತ್ತೊ
ಲಿಸಿದುಂಟೇ ಖಾನ ನೀನೆಂದಾ ॥ ೫ ॥

ಯಾವ ಮತದೊಳು ಜನಿಸಿ ಬಂದರು । ದೇವನೊಬ್ಬನೆ ಸಕಲ
ಜೀವಿಯ। ಕಾವ ಹೊಣೆಯಾತನಿಗೆ ಮತದ ರಹಸ್ಯವೊಂದೆಯಲಾ ॥ ಆವ
ಧರ್ಮದೊಳಿಹುದು ಸೋದರ। ಭಾವವನು ಬಿಟ್ಟನ್ಯಧರ್ಮದ । ಸೇವಕರ
ನೆರೆ ಕೊಲುವ ಹಿಂಸಾಚಾರ ಪೇಳೆಂದಾ ॥ ೬ ॥

ಪರಮತಾ ಪೀಡಕರು ಸ್ವಾರ್ಥದ। ಪಿರಿಯ ಸಾಧಕರಂಧಶ್ರದ್ಧೆಯ।
ಗುರುಗಳೆನಿಸಿದ ನಿನ್ನ ಮುಲ್ಲಾ ಖಾಜಿ ಮೌಲ್ವಿಗಳೂ ॥ ಪರಮ ದೈವದ
ನಾಮದೊಳು ಕೇ। ಳರಸ ಕಡು ಸೈತಾನ ವೃತ್ತಿಯ। ಶರಣನೆಂದೆನಿಸಿದರು
ತಿಳಿಯದು ಖಾನ ನಿನಗೆಂದಾ ॥ ೭ ॥

ಶಾಂತಿ ಇಸ್ಲಾಂ ಮತದ ತತ್ವವು । ಶಾಂತಿ ಸಮತೆಯ ನಿತ್ಯ
ಬೋಧಿಪ। ಶಾಂತಿ ಮತ ಸಂಭೂತ ನೀನಧಿಕಾರಮದದಿಂದಾ ॥ ಭ್ರಾಂತ
ನಂದದಿ ದೇವ ಮಂದಿರ। ಕಾಂತೆಯರ ಕೆಡಿಸುತಲಿ ವಿಶ್ವದ। ಕ್ರಾಂತಿಮೂರ್ತನು
ನೀನೆಲಾ ಸುಲ್ತಾನ ಕೇಳೆಂದಾ ॥ ೮ ॥

ಉತ್ತಮದ ಭಾರತದ ಶಿಲ್ಪದ। ಕುತ್ತಿ ನೆಲಸಮಗೈದು ಗಾಯಕ
ವೃತ್ತಿಯರ ಬಿಸಿ ತೈಲ ಭಾಂಡದೊಳಿಟ್ಟು ಕುದಿಸಿದೆವೊ ॥ ಸತ್ವ ಭುಜಬಲ
ದಿಂದ ಶಿಲೆಯನು। ಕೆತ್ತಲಪ್ಪುದೆ ಹಾಡಲಪ್ಪುದೆ। ವೃತ್ತಿ ಪೈಶಾಚವಿದು
ಸಲ್ಲದು ಖಾನ ನಿನಗೆಂದಾ ॥ ೯ ॥

ಜೋಕೆ ಮರಣೋನ್ಮುಖನು ಎನ್ನವಿ। ವೇಕ ನಿನಗೊಪ್ಪುವುದೆ ಮಿಗೆ
ಉಲ್ಲೇಖವಿತಿಹಾಸದೊಳು ಸುವರ್ಣಾಕ್ಷರದೊಳಿಸೆಯುವುದೂ ಸಾಕುಮೋ
ತೊಗಲಕನ ಶಾಸನ ಲೋಕ ಗಾದೆಯದಾಗಿ ಮೆರೆಯುವುದು ಸಾಕು ಖಡ್ಗದಿ
ಶಿರವ ಛೇದಿಸಿ ಬಿಸುಡು ನೀನೆಂದಾ ॥ ೧೦

|| ರಾಗ | ಕಾಂಬೋದಿ | ಝಂಪೆ ||

ಏನೆಲವೊ ಕಡು ಮೂರ್ಖ | ಜಾಣತನ ಮಾತಿನೊಳು | ಪ್ರಾಣವನ್ನುಳಿಸ ಬಗೆದಿಹೆಯಾ | ತಾನಿತ್ತ ಜೀವ ವಧೆ ನಿನಗೆ ಸಾಲದೆನುತ್ತ | ಆನಪ್ಪ ಸಂಕಟವನ್ನು ಕರೆದೂ | ೧ || ಕೊಂಡು ಪೋಗೀತನನು ಹಿಂಡಾಗಿ ನಾರಿಯರ | ತಂಡದಿಂದಪಮಾನ ಗೈಸೀ || ತುಂಡು ತುಂಡಾಗೀತನನು ಕತ್ತರಿಸಿ ಗಜಗಳಿಗೆ | ತಂಡುಲದೊಳಿಕ್ಕಿ ತಿನಿಸುವುದೂ || ೨ || ಬಳಿಕ ಮಂತ್ರಿಯೊಳೆಂದ | ಬಲವನುರೆ ದಣಿಸಿದರು | ಫಲವೇನು ರಾಜಜೊಕ್ಕಸದಾ || ನೆಲೆಯರಿಯರಾಯ್ತು ನರೆ | ಯೊಳಗಿರುವ ಹಿಂದುಗಳು | ಛಲವಂತರೆಂದು ತೋರುವುದೂ || ೩ || ಕಾರಾಗೃಹದೊಳಿಹದ ನವರಂಗ ಮಹಲಿನೊಳು | ಸೇರಿಸುತ ನಾರಿ ಜೀವನತಳಾ || ಭೂರಿ ಶೃಂಗಾರ ಕಪಟದಿ ಮನವನಕರಗಿಸು | ತಾರಹಸ್ಯವ ನರಿವುದೈಸೀ || ೪ ||

|| ಕಂದಪದ್ಯ ||

ಬಳಿಕಾ ರಾಯರು ಕತ್ತಲಿ | ನಿಲಯವ ತೊರೆದು ನವರಂಗ ಮಹಲಿನೊಳಾಗಳ್ || ಸಲೆ ಭೂಪಾಲಕನತಿಥೀ | ನಲ್ಮೆಯಿಂದಿರ್ದರು ಜೀವನ ಬಲಿಯೆಂದೆನುತಂ || ೧ ||

|| ರಾ | ಮೋಹನ | ಅಷ್ಟ ||

ನವರಂಗ ಮಹಲಿನೊಳೂ | ಮನದ ಬೇಸ | ರವ ಕಳೆಯಲು ನಿತ್ಯವೂ || ಯುವನ ಸುಂದರಿಯರು | ವಿವಿಧ ವಿನೋದದಿ | ಇವರ ಮೆಚ್ಚಿಸುತೀರ್ದರೂ || ನವ || ೧ || ಅಂಗನಾಮಣಿಯರೊಳೂ | ಜೀನತಳೆಂಬ | ಭೃಂಗಕುಂತಳೆಯು ತಾನೂ || ಅಂಗಾಂಗದೊಳು ನವ | ಭಂಗಿಯಿಂದೊಲಿಯುತ್ತ | ಸಂಗೀತ ಪಾಡುವಳೂ || ನವ || ೨ || ಕುಸುಮಾಸ್ತ್ರಿ ದಿನ ದಿನದೀ | ಮಂಚ್ಯಾರದ | ಪೊಸ ಬಲೆಯೊಳು ಮುಳುಗೀ || ರಸಿಕನಾಗಿಹ ರಾಮು | ರಾಯ ಕಂದರ್ಪನ | ವಶನಾದನೆಂದರಿತೂ || ನವ || ೩ || ಕಂತು ಸ್ವರೂಪನನೂ | ಮನದೊಳಿಹ | ಅಂತರಂಗವ ಬಲ್ಲೆನೂ | ಕಾಂತನೆಂದೆನಿಸು ವೈ | ವಾಹದೊಳೆನ್ನಯ | ಸಂತೋಷ ಉಭಯರಿಗೂ || ನವ || ೪ || ಹಿಂದುವಾಗಿಯೆ ಮೆರೆವೂ | ಯವನರೊಳು | ಬಾಂಧವ್ಯ ಮನಕೊಪ್ಪವೂ || ಸುಂದರಿ ನಿನಗಾಗಿ | ಇಂದು ಮತಾಂತರ | ಹೊಂದುವೆ ಕೇಳೆನ್ನನೂ || ೫ || ವಧುವಿಗೆ ಪೂರ್ವದೊಳೂ | ಪಿತ್ರವನಿ | ನಿಧಿ ನಮ್ಮ ಜಾತಿಯೊಳೂ || ಜಮರಸೆ

[illegible] | [illegible] ಪಸ್ತುಪ | [illegible] ‖ ೬ ‖ [illegible] [illegible] ಬಹುಮಾನವನೆಂತೀವೆನೂ ‖ ಜಾಣೆ ನಿನ್ನಯ [illegible] | [illegible] | ಧಾಪಮಾ [illegible] ‖ ೭ ‖ ಆನೆ ಗೊಂಬಿಯು ಸಂಪದಾ | ಎಕ್ಕೆ [illegible] | [illegible] | ಮಾನ [illegible] | [illegible] | [illegible] ‖ ೮ ‖ ಹಗೆ [illegible] | [illegible] | [illegible] | ಜಗಕ್ಕೆ ಪ್ರೊ [illegible] | [illegible] | [illegible] ನಾ [illegible] ‖ ೯ ‖ ನಂಬಿಕೆ [illegible] | [illegible] | [illegible] ಗುಪ್ತದಿ ‖ ನಂಬಿಸಿ [illegible] | [illegible] | ನಂಬಿದನೆಲ್ಲವನೂ ‖ ನವ | ೧೦ ‖

‖ ಭಾಮಿನಿ ‖

[illegible] ಬರೆಯು [illegible] | ಪಾತಕೆ ತರ್ಪಣೆ ಕೊಡಿಸಿತ [illegible] | [illegible] ನಿಧಿಯು ರಹಸ್ಯದಿಂದು [illegible] ‖ ಅತಿ ಹಿತದಿ [illegible] | [illegible] ಮಹಸ್ಮರ | [illegible] ಸುತ ಕರೆಸಿದ [illegible] ‖ ೧ ‖

‖ ರಾ | ಸೂರಟ | ಏಕ ‖

[illegible] | [illegible] | [illegible] ‖ [illegible] | [illegible] | [illegible] | [illegible] ಕೇಳು ‖ [illegible] | ಪೈಭವ | [illegible] | [illegible] | [illegible] | [illegible] | ಕೇಳು [illegible] | [illegible] | [illegible] | [illegible] | ಕೇಳು [illegible] | [illegible] | [illegible] ‖ ಮುಂದೆ [illegible] | [illegible] | [illegible] | [illegible] | [illegible] | [illegible] | [illegible] ‖ [illegible] ಸೇಸೆಗ | [illegible]

|| ವಾರ್ದಿಕ ||

ಮುಂದೆ ಲಾಲಿಸು ದೇವರಾಯು ಕಾಲೋಚಿತವ | ಹೊಂದಿಕೊಳೆ ಹಿಡಿಯಿಸಿ ಮಹಮ್ಮದನು ವಿವರಿಸಿದ | ಸಂಧಾನಕೊಪ್ಪಿಯಧಿಕಾರವಂ ಪಡೆದು ಗಜ | ಗೊಂದಿಯೊಳಗಿರುತಿರೆ || ಮುಂದಿ ಮಾರ್ಬಲ ಯುಕ್ತ ಸೇನೆಯು ಸಮುಬತಾ | ತಂದು ದುರ್ಗದಿ ಠಾಣ್ಯವಿಕ್ಕಿ ಹಿಂದೂ ಜನರು | ಎಂದಿಗಾದರೂ ದಂಗೆ ಏಳದಿಹರೆಂಬ ಭಯ | ದಿಂದಿರಲು ನದಿ ತಟದೊಳು || ೧ ||

|| ರಾಗ | ಕೇತಾರಗೌಳ || ಅಷ್ಟ ||

ಏಕವ ಹಂಸೆಯು ವಿರೂಪಾಕ್ಷ ಮಂದಿರದಲಿ | ಅಸಮ ಸಾಹಸರೆಲ್ಲರೂ || ದೆಸೆ ದೆಸೆಯಿಂದ ಜಿಂಬಲವ ಸಂಪಾದಿಸಿ | ಪ್ರೋಕ್ಷ ಸ್ಕೃಶ್ಯ ಸನ್ನಾಹದೀ || ೧ || ಚಿತ್ರ ಪಟ್ಟಣದಿ ಯಾಚಕರಂತೆ ಗುಪ್ತದಿ | ಸುತ್ತುತ ನಾಯಕರೂ || ವೃತ್ತಾಂತಗಳ ನೆಲ್ಲ ತಿಳಿದು ವಿದ್ಯಾರಣ್ಯ | ರುತ್ವಿಜನಿಗೆ ಪೇಳ್ವರೂ || ೨ || ಇರಲೊಂದು ದಿನ ಬುಕ್ಕ | ನರಗುತ್ತ್ರಜಗಂದ | ಸುರುದ್ರೋಹಿ ದೇವರಾಯಾ | ಸೆರೆಗೊಪ್ಪಿ ಯವನಗೆ | ಸೆರೆಯನುಳಿದು ಬಂದು | ಪುರಪಟ್ಟವೇರಿಹನೂ || ೩ || ನಾಯಕ ಕುಲಕೆ ವಂಚನೆ ಗೈದು ಮೆರೆದಿಹ | ಹೇಯ ವೃತ್ತಿಯ ಧೂರ್ತನಾ | ಆಯು ಲಿಪ್ಸೆಯನ್ನು ಕೊಂದು ಬರುವೆನೆನೆ | ಬರುತೀರ್ಥನು ಪೇಳ್ದನೂ || ೪ || ಸ್ವೈರಿಸು ದೇವರಾಯನು ಸ್ವಾರ್ಥದಿಂದಿಯುದ | ಕರುಣಾ ನಿಜವಲ್ಲವು | ದೊರೆ ಯುಲಿಹುದು ಫಲವದರಿಂದೆಲಾತನ | ಬರಿಸುವೆನಿಲ್ಲಿಗೆಂದೂ || ೫ ||

|| ವಾರ್ದಿಕ ||

ಎಂದರುಹಿ ರತ್ನ ದಮನಾಥ್ಯವನಿಸಗೆ ನಾ | ಬಂದಿಹೆವು ಸಕಲ ಸನ್ನಾಹದಿ ವಿರೂಪಾಕ್ಷ | ಮಂದಿರದೊಳೇರಾತ್ರಿ ತಾವೋರ್ವರ್ಗೈತಂದು ನಮಗೆ ಸಂದರ್ಶಿಸುತಾ || ಸಂದೇಶವಂ ಕಳುಹೆ ದೇವರಾಯನು ಮನದಿ | ಸಂದೇಹವಿಂದ ಲಿದರರ್ಥವಂ ತಿಳಿದು ಮುದ | ದಿಂದ ಬರಲಾಸಿಸಿ ಗೋಳಿದಿಗೆ ಗೋಂಡ ಮುನಿ ನರಂ ಕೊಂಡಾಡುತಾನಂದದೀ ||

|| ರಾಗ | ಶಂಕರಾ ಭರಣ | ತ್ರಿಪುಡೆ ||

ಬಂದಿರೇ ನಾಯಕರೆ ದೈವವು | ಬಂದುಗೂಡಿಸಿತೆಮ್ಮನೂ || ಮುಂದೆ ಕನ್ನಡ ಕುಲ ಯಶಸ್ಸಿನ | ದುಂದುಭಿಯು ನಿಮ್ಮಿಂದಲೀ || ಮೊಳಗುತಿರಲೀ |

ಬಂದಿರೇ ॥ ೧ ॥ ಕಾಲಗತಿಗನುಕೂಲವೆನುತಲಿ । ಬಾಳು ಪಟ್ಟವನೇರಿದೂ । ಆಳಿದನವಂಚಿಸಿದ ಕಲಿಯನು । ತಾಳಲಾಯಿತು ವಿಧಿಯದೂ ॥ ಮನ್ನಿಸುವುದೂ ॥ ೨ ॥ ಕೇಳಿದಿರೆ ನೀವೆಲ್ಲರೀತನ ಶೀಲದೊಳು ಸಂಶಯವನೂ ತಾಳುವುದು ಥರವಲ್ಲ ಮುಂದಿನ। ಕಾಳಗಕ್ಕೆ ಸಹಾಯವೂ ಒದಗಲಿಹುದೂ ॥ ೩ ॥

॥ ರಾ । ಕೇತಾರ ಗೌಳ । ಅಷ್ಟ ॥

ಯವನ ಸುಂದರಿಯು ವಯ್ಯಾರದಿ ಕರಣಿಕ । ಹವಣಿಸಿದನು ಜ್ಯೋಹವಾ ॥ ಕುವರಿ ಪದ್ಮಾವತಿ ಪಸಾದಳೆಂಬುವ । ಹವಣವನರಿತುದಿಲ್ಲಾ ॥ ೧ ॥ ದಿನಹರಣವ ಮಾಡ । ದನುವರಕೊದಗುವ । ಘನ ಸೇನೆ ಬಹವೊದಲೇ । ದಿನಪ ನಸ್ತಮಿಸಿದ ಬಳಿಕ ರಾತ್ರಿಯ ವೇಳೆ । ಅನುಕೂಲ ಸಮಯವೆಂದೂ ॥ ೨ ॥ ಪ್ರೀತಿಯಿಂದೆಲ್ಲರೊಂದಾಗಿ ನಿರ್ಣಯ ಗೈದು । ಮಾತಾಡಿ ಬೀಳ್ಕೊಳ್ಳಲೂ ॥ ಆ ತಪೋನಿಧಿ ವಿದ್ಯಾರಣ್ಯರ ಬಲದಿಂದ ಸ್ತೋತ್ರ ಚಿಂತೆಯು ತಗ್ಗಲೂ ॥ ೩ ॥

॥ ಭಾಮಿನಿ ॥

ಪುರಪ ಘುರ ಮಧ್ಯದಲಿ ತೋರಿದಿಹ । ಗಿರಿಜೆ ಪದ್ಮಾವತಿಯರೊಗ್ಗಿಲಿ । ಗಿರಿತಟದ ಗಂಹರದೊಳಿರ್ದರು । ಗುಪ್ತವಾಸದಲಿ । ಕರದಿ ಜೋಳಿಗೆ ಪಿಡಿದ. ಯೋಗಿ । ಕ್ತರಿಯ ವೇಷವನಾಂತುಪುರದ ಸಂ । ಚರಿಸಿ ಬಂದಿಹ ಗಿರಿಜೆಯೊಂದಿನ ಪೇಳ್ದಳೊಡತಿಯೊಳೂ ॥ ೧ ॥

॥ ರಾಗ । ಆರ್ಯ । ಏಕ ॥

ಅರಸಿ ಕೇಳ್ ನಮ್ಮಯ । ಪುರದ ಪಟ್ಟದ ಮಂತ್ರಿ । ವರದೇವರಾಯನಾಳುವನೂ ಪರಿಯೊಳಿರಲು ಮ್ಲೇಂಛ ದೊರೆಯು । ಸ್ನೇಹದ ಗೈದು । ಧರೆಯನೀತಗೆ ಕೊಟ್ಟನಂತೇ ॥ ೧ ॥ ಧೀರನಾಗಿಹ ರಾಮ । ರಾಯ ಜೀನತಳೆಂಬ । ನಾರಿಯ ವಯ್ಯಾರಕೊಲಿದೂ । ಸೇರಿ ಮುಸಲ್ಮಾನನಾಗಿ ಡಿಲ್ಲಿಯ ಬಿಟ್ಟು । ಬಾರದೆಯುಳಿದನಲ್ಲೇ ॥ ಅರ ॥ ೨ ॥ ಹರಿಹರ ಬುಕ್ಕರು । ಪುರದ ಸಿಧ್ಧತೆಯಿಂದ । ಇರುವರೆನ್ನುತ ಸರ್ವಜನರೂ ॥ ವರವರ್ಣಿನಿ ಮತ್ತೆ । ಇರುವ ರಾಜ್ಯಗಳನ್ನು । ಅರಿತವರಾರಿಲ್ಲವಂತೇ ॥ ಅರ ॥ ೩ ॥ ಮುದ್ದು ಬಾಲಿಕೆ ಕೇಳು । ಬುದ್ಧಿವಂತನು [illegible] । ಸಿದ್ಧ ಪಂಪಾ ಕ್ಷೇತ್ರದಲ್ಲಿ । ಗದ್ದೆ ಬಂದಿಹನಂತೆ । ಶ್ರದ್ಧೆಯುಳ್ಳವರನ್ನು । ಉದ್ಧರಿಸುವನೆಂಬರೆಲ್ಲಾ ॥ ಅರ

॥ ೪ ॥ ತೆರಳುವ ನಾವಿಂದು । ಪರಿರಾತ್ರಿಯೊಳಗಲ್ಲಿ । ಪರ ಸಾಧುಗಳ ದಯದೀ । ತರುಣಿ ನಮ್ಮಯ ಚಿಂತೆ ಮರೆಯುವ ದಾರಿಯು । ಸರಿತು ಬರುವುದೆಂದಳೂ ॥ ಆರ ॥ ೫ ॥

॥ ಕಂದಪದ್ಯ ॥

ಎಂದಾ ಸತಿಯರು ಸಖಿಯೊಳು । ಬಂದರು ಧೈರ್ಯದಿಂ ಪಂಪಾಕ್ಷೇತ್ರದೆಡೆಗಂ । ಮುಂದಿರ ಪ್ರೋಕ್ತಾ ಶಿಷ್ಯರ । ವೃಂದದ ಮಧ್ಯದೊಳಿಹ ಗುರುವರಗೆರಗಲ್ ॥ ೧ ॥

॥ ರಾಗ । ಬಿಲಹರಿ । ಅಷ್ಟ ॥

ಯಾರವ್ವಾ । ನೀವು । ಯಾರವ್ವಾ । ಯಾರಮ್ಮ ನೀವಿಂದು ಅಪರಾತ್ರಿಯಲ್ಲೀ । ನಾರಿಯರೀರ್ವರು ಬಂದುದೇಕಿಲ್ಲೀ । ಧಾರುಣಿಯೊಳು ವ್ಯಾಂಘ ಭಯವು ಹೆಚ್ಚಿರಲೂ । ಧೀರರಂದದಿ ಬಂದುದತಿಶಯವೆನಲೂ ॥ ಯಾರವ್ವಾ ॥ ೧ ॥ ಗುರುವರ್ಯ ನಿಭಾಗ್ಯರೆಮ್ಮ ಪೂರ್ವದಲೀ । ತೊರೆದ ಬಾಂಧವರ ಕಾಣದೆ ಮರುಗುತಲೀ । ತಿರುಗಿ ವನಾಂತರ ತಮ್ಮ ದರ್ಶನದೀ । ತೊರವೆ ಚಿಂತೆಯನೆಂದು ಬಂದೆವೀ ದಿನದೀ ॥ ಯಾರ ॥ ೨ ॥ ಕ್ಷೋಣಿಪ ಕುವರಿ ಪದ್ಮಾವತಿಯಿವಳೂ । ಈ ನರೋತ್ತಮ ನಾಯಕನ ಮೋಹಿಸಿಹಳೂ । ದಾನವರೊಕ್ಕಗ್ಗೆದ ಮೇಲೆ ಪಟ್ಟಣವಾ । ಕಾನನದೊಳಗಿದ್ದು ಕಳೆದೆವು ದಿನವಾ ॥ ಯಾರ ॥ ೩ ॥ ಬಾಲೆಯ ಚಾರಿತ್ರ ಅರಸೀರ್ದ ಲತೆಯಾ । ಕಾಲಿಡೆ ಕಂಡಂತಾಯಿತು ಬಿಡು ಭಯವಾ । ಲೋಲಲೋಚನೆ ಯಾನೆಗೊಂದಿಯ ನೀನೇ । ಆಳುವ ಯೋಗ ಸೌಭಾಗ್ಯ ಸಂಪನ್ನೆ ॥ ಯಾರ ॥ ೪ ॥

ಕಿರಿದಿನದೊಳು ಹರಿಹರನನ್ನು ವರಿಸೀ । ಹರಿಣಾಕ್ಷಿ ರಾಜ್ಯ ಪಟ್ಟವನು ಸ್ವೀಕರಿಸೀ । ಸರಸದಿಂದಿಹ ಕಾಲ ಬರುವುದೆಂದೆನುತಾ । ತರಳೆಯ ಸಂತೈಸಿ ಯತಿವರ್ಯ ನಗುತಾ ॥ ಯಾರ ॥ ೫ ॥ ಕರೆಯಲೊಡನೆ ಬಂದು ನಿಲಲು ನಾಯಕರೂ । ಧೊರೆ ಕುವರಿಯ ಕಂಡು ವಿಸ್ಮಯ ಪಡಲೂ । ವರೆದು ವಿದ್ಯಾರಣ್ಯರೆಲ್ಲ ವಿಸ್ತಾರಾ । ಹರುಷದೊಳಿರಲು ಕೇಳ್ ಮುಂದಿನ ವಿವರಾ ॥ ೬ ॥

॥ ಭಾಮಿನಿ ॥

ಹೋದುವಿತೆರ ಹಲವು ದಿನ ಘನ । ನಾದ ಸೇನಾ ಶರಧಿ ವನದೊಳು । ಕಾದಲುತ್ಸಾಹದೊಳಗಿರೆ ಶುಭ ದಿನದಿ ಗುರು ಮತದೀ । ಮೇಧಿನಿಪ

ಕೇಳಿರುಳು ದುರ್ಗದೊ । ಳಾ ದುರುಳರತಿ ಮದ್ಯಪಾನ ಪಿ । ನೋದದಿಂ ವೈಮರೆತು ಮಲಗಿದ ಸಮಯವನ್ನರಿತೂ ॥ ೧ ॥

॥ ರಾಗ ಸೌರಷ್ಟ್ರ । ತ್ರಿವುಡೆ ॥

ಮುತ್ತಿದರು ದುರ್ಗವನು ಹಲವರು । ಹತ್ತಿದರು ಲಗ್ಗೆಯನು ಬಾಗಿಲ ಭೃತ್ಯರನು ಕಂದಕದೊಳೊಗೆದರು । ಸತ್ವದಿಂದಾ ॥ ೧ ॥ ದಾಟಿ ದ್ವಾರವ ಸಿಂಹ ನಾದದಿ । ಕೋಟೆಯನ್ನೊಳ ಪೊಗುತ ಯವನರ । ಕೂಟವನ್ನರಸುತ್ತೈದರು । ಕೀಟಲೆಯನೂ ॥ ೨ ॥ ವೈರಿ ತೋರ್ದರ ಮನ್ನಿಸಿದ ರಪಿ। ತತ್ವ ಗೈದರ ಕತ್ತರಿಸಿದರು ॥ ಮುತ್ತಿ ಯವನ ಗುಡಾರಕಗ್ನಿಯ । ನಿತ್ತು ಬಳಿಕಾ ॥ ೩ ॥ ಏನಿದದ್ಭುತವೆನುತಯೂಬಾ । ಖಾನನೆಚ್ಚರಗೊಳುತ ದುರ್ಗದ । ಹಾನ ಹಾನಿಯ ಕಂಡು ಬೆಚ್ಚಿದ । ಏನಿದೆನುತಾ ॥ ೪ ॥ ಕರೆಯಿರೊ । ಘಡ ದೇವರಾಯನ । ತರಿಯಿರೊ ! ಹಿಂದುಗಳ ಶಿರವನು । ಸುರಿಯಿರೋ ಜಲವ ನ್ನಿಗೆನುತಲಿ । ಮರುಳರಂತೇ ॥ ೫ ॥ ಅಸಿತರೊಳಗಾ ಹಿಂದು ಸೇನೆಯು । ವನದಿ ಬೋರ್ಗರೆವಂತೆ ಖಾನನ । ಸನಿಹ ಕೈತಂದಾಗ ಹರಿಹರ । ಕಿನಿಸಿ ನಿಂದಾ ॥ ೬ ॥

ರಾ । ಭೈರವಿ । ಏಕತಾಳ ॥

ಧುರುಳ ಯವನ ಕೇಳಿತ್ತಾ । ಈ । ಪುರದೊಡೆಯರು ದಳಸಹಿತಾ ॥ ಬರುತಿಹರೈದುರವೆಸಗೇ । ನೀ । ಶರಣೆನುಕಾವೆವುಕಡೆಗೇ ॥ ೧ ॥ ಧುರಧೀರರು ನಾವಿರಲೂ । ಆ । ಸ್ವರು ಖಪಪತಿಗಳದಾರೂ ॥ ಧರೆ ನಮಗೊಲಿದಿಹಕಾಲಾ । ತಲೆ । ಮರೆಸಿಹರೇಕವರೆಲ್ಲಾ ॥ ೨ ॥ ಪಾಪದಿ ನಿಮ್ಮ ವಸಾನಾ । ಎಂ । ದೀಪರಿ ತಳೆದಿರೆ ಮೌನಾ ॥ ಪೋಪೆಯೊದುರ್ಗವನುಳಿದೂ । ಪ್ರ । ತಾಪ ನಡೆಯದೆನೆ ಮುಳಿದೂ ॥ ೩ ॥

। ರಾ । ಭೈರವಿ । ಅಷ್ಟ ॥

ಬಂದೆಯಾ ಧುರಕೆನ್ನೊಳೂ । ನಿನ್ನಯ ಮೋಸ । ದಂದವ ಬಲ್ಲೆನಾನೂ ॥ ಆದಿನ ಬವರದ ಪರಿಯನು ತಿಳಿಯದೆ । ಬಂದವ ನೀನಾರೆಲಾ ॥ ೧ ॥ ಧೊರೆಗತಿ ಹಿತನೆನಿಸೀ । ಈ ನಗರದ ಭರಿತ ಕೀರ್ತಿಗೆ ಶ್ರಮಿಸೀ ॥ ನಿರತ ಸ್ವಾರ್ಥಿಗಳ ಸಂ । ಹರಿಸಲೈ ತಂದಿಹ । ಹರಿಹರನೆನಲೇಂದನೂ ॥ ೨ ॥ ಸ್ವಾಮಿ ಕಾರ್ಯಕೆ ತನುವಾ । ಅರ್ಪಿಸಿದೆಯೆ । ಆ ಮಹಾ ರಣರಂಗವಾ ॥ ಸ್ವಾಮಿಯ ಬಲಿಯಿತ್ತು । ಪ್ರಾಣದೊಳೋಡಿದ । ಸ್ವಾಮಿದ್ರೋಹಿಯು ನೀನೆಲಾ ॥ ೩ ॥

ಬಳಿಕತಿರೋಹಿತವೊಳು | ಶತ್ರುಕ್ಷತ್ರು | ಸಲೆಕಾದಿ ಸಮಸಾಗಲು | ಇಂದು ಸಾಹಸದಿಂದ | ಧಲದಂಕರೀರ್ವರು | ಮಾಲೆತು ಮಲ್ಲರ ತೆರದಿ | ೬ ||

|| ವಾರ್ಧಿಕ ||

ಇತ್ತಲವರೀರ್ವರತಿ ಸತ್ವದಿಂ ಸೆಣಸುತಿರ | ಲತ್ತಲು ಜನಾಲಿಸಂಬುಕ್ತ ಸಂಗರದಲ್ಲಿ | ಶತ್ರುರಿಪು ಮಿಕ್ಕಿರ್ದ ಯವನ ಸೇನೆಯನೆಲ್ಲ ಕಾತಿರ್ಕೆಯವನ ತೆರದಲಿ | ಚಿತ್ರಹಿಂಸೆಯು ಗೈದು ಆಗ್ರಹದಿಸೆಳೆತಸದೆ | ಮತ್ತದು ಬರುತಿರಲ್ ಹರಿಹರನಸಹೋದರನು | ಶತ್ರುಯುದ್ಧದಿ ಗೆಲಿದು ಮಗುಳವನ ಸೆರೆವಿಡಿದು | ಅಬ್ಬರಾಸವಗೈದನೂ || ೧ ||

|| ಭಾಮಿನಿ ||

ಪ್ರಾಣ ಭಯದಿಂ ಯವನ ತನ್ನಯ | ಗೋಣನೊಪ್ಪುತಲಿಂದ ಮನ್ನಿಸು | ತಾನದೇನಪರಾಧಗೈದಿಹೆ ಸ್ವಾಮಿ ಕಾರ್ಯನಿದೂ || ಹೀನರಿಂದಾದಪನ್ನ [illegible] | ಮಾನಿತನು ಕರ್ತವ್ಯ ನಡೆಸಿದ | ಓ ನಿರೋಧವಿದೇಕೆ ಕೊಲದಿರು ಜೀವದನ್ನುಳಿಸೂ || ೧ || ಹೇಳಿ ಬಗೆಯರಿಂದು ನೀ ರಣ | ಹೇಡಿಯಂದದಿ ದೇಕೆ ನಾತಿನ | ಮೋದಿಗಂಧದ ಹುಲು ಜನರ ತಲೆ ಕಡಿದ ವಿದ್ಯೆಯನೂ | ರೂಢಿಸುತಲಾ ಯವನರೊಡೆಯನ | ನಾಡ ದೈವವದೆಂದು ಪೊಗಳಿ | ಬೇಡಿದಧಿಕಾರವಿದು ನಡೆವುದಿ ಹಗೆಗಳವಿದಿನಲೀ || ೨ || ಪೋಗು ನೀ ನಡೆ ನಿನ್ನ ವಧೆಯಿಂ | ತಾಗುವುದು ಅಪಕೀರ್ತಿಯಬ್ಬದೆ | ಆ ಗರುವ ತೊಗಲಿಕನಸಿದಿಂಪ ಯೋಗ ಬರಲೆಂದೂ || ಸಾಗಿಸಿದನಾತನನು ದುರ್ಗದ | ಬಾಗಿಲಿಂ ಹೊರಗಿಕ್ಕಿ ಬಂದಾ | ಬಾಗಿಸಿದ ಶಿರ ದೇವ ವಿದ್ಯಾರಣ್ಯ ಚರಣದಲೀ | ೩ ||

ರಾ | ಸಾರಷ್ಟ | ಅಷ್ಟ ||

ಕೇಳಿ ನಾಯಕ ದೇವ | ರಾಯರೆಲ್ಲರಿಂದು | ಕೇಳಿರಯ್ಯಾ || ಪಲ್ಲ | ಕೀಲಕೆಂದುಬ್ಬಿ ಮೌನದೊಳಿರಲಾಗದು | ಕೇಳಿರಯ್ಯಾ || ೧ || ಮರೆಯದೆ ಸೋಲಿಸು | ದುರುಳದೈತ್ಯಹರಿಸ್ಸು | ಕೇಳಿರಯ್ಯಾ || ಇದ | ನಿತು ಹಿಂದೂ ಜನ ಪ್ರಬಲ ಸಾಮ್ರಾಜ್ಯವ | ಕೇಳಿರಯ್ಯಾ || ವರವೀರಯವನರ ನಿರ್ಮೂಲಿಸಿದೆಡೆಯೊಳು | ಕೇಳಿರಯ್ಯಾ || ಒಂದು | ವರುಷ ದಾಟುವ ಮುನ್ನ ನಿಂಬೆವುದದರನ್ನು || ಕೇಳಿರಯ್ಯಾ || ೨ || ಮಡಿದ ಭೂಮಿಪಸಾಮ್ರಬಲಯಕೆಯಿಂ

ದದೊಳಾವು। ಕೇಳಿರಯ್ಯಾ। ಈ। ಪೊಡವಿಯ ಪಟ್ಟ ಪದ್ಮಾವತಿಗೀವುದು। ಕೇಳಿರಯ್ಯಾ ॥ ವಡೆಯನಿಚ್ಛಿಸಿದಂತೆ ಹರಿಹರನಾಕೆಯ। ಕೇಳಿರಯ್ಯಾ। ಮುಂದೆನಡೆಸಿ ಕಲ್ಯಾಣವ ಧರಣಿಯನಾಳ್ವುದು ॥ ಕೇಳಿರಯ್ಯಾ ॥ ೩ ॥

ವಾರ್ಧಿಕ ॥

ಮತ್ತೆ ಹೊಯ್ಸಳದ ಬಲ್ಲಾಳ ರಾಯನ ಕರಸಿ। ಪೃಥ್ವಿಪನ ಸುತೆಗೆ ಕಲ್ಯಾಣ ಮಂಟಪವನದ। ರೊತ್ತಿನಲಿ ದಿವ್ಯ। ಸ್ವಾತಂತ್ರ ರಾಷ್ಟ್ರವ ಬಲಿಪ ಸತ್ವವಿಹ ಶಿಲ್ಪಿಗಳನೂ ॥ ಹತ್ತು ಕಡೆಯಿಂ ಬರಿಸಿ ಕಾರ್ಯವಾರಂಭಿಸಲು। ಚಿತ್ತದಲಿ ಹರಿಹರಂ ಪದ್ಮಾವತಿಯ ಸಹಿತ। ಉತ್ತಮೋತ್ತಮವೆನಿಪದೊಂದು ಕಜ್ಜವ ನೆನೆದು ಹತ್ತಿರಕೆ ಶಿಲ್ಪಿಗಳನೂ ॥ ೧ ॥

॥ ರಾ। ಕೇತಾರಗೌಳ। ಅಷ್ಟ ॥

ಕರದೆಂದರೆಲಿ ಶಿಲ್ಪಿವರ ನಿನ್ನೊಳಿಹ ದಿವ್ಯ। ತರವಾದ ಪ್ರತಿಭೆಯಲೀ। ಗುರು ವಿದ್ಯಾರಣ್ಯರ ಮೆರೆವ ಮೂರ್ತಿಯನೊಂದ। ನೆರವರರಿಯದಂತೇ ॥ ೧ ॥ ಚಂದ್ರ ಪ್ರಭೆಯ ಪೋಲ್ವ। ಚಂದ್ರಕಾಂತಾ ಶಿಲೆ। ಯಿಂದ ತ್ರೈಜಗ ಮೆಚ್ಚುವಾ ॥ ಅಂದದೊಳೊಂದು ಮಾಸಾಂತ್ಯದೊಳೊದಗಿಪ। ದೆಂದು ನೇಮಿಸಲೊಪ್ಪುತಾ ॥ ೨ ॥ ಅಸಮ ಸಾಹಸಿ ಶಿಲ್ಪಿ। ಎಸುಗೆಯನೆಣಿಸದೆ। ನಿಶಿಯೊಳಾ ಗುರುವರ್ಯರಾ ॥ ಪೊಸತು ವಿಗ್ರಹವ ಕೌಶಲ್ಯದಿ ನಿರ್ಮಿಸಿ। ವಸುಧೀಶ ಸುತೆಗೊಪ್ಪಿಸೇ ॥ ೩ ॥

॥ ಭಾಮಿನಿ ॥

ಲಲನೆ ಬಳಿಕಾ ಯತಿವರಂಗವ। ತಿಳುಪಿ ನವ ದುರ್ಗದ ಮಹಾ ಬಾ। ಗಿಲೊಳುತ್ತಮ ವಿಗ್ರಹದ ನಯನ ಸರ್ವ ಪ್ರಜೆಗಳಿಗೆ। ಥಳಿಸ ಲಿದ ಸ್ಥಾಪಿಸಲು ಕೃಪೆ ಮಾ। ಡಲಘುಮತಿ ಸಿಗೆಸಲು ಭೂ ಸುರ। ತಿಲಕನತಿಸಲವಾಂತು ಬರೆಯೆಂದಿತ್ತನೊಪ್ಪಿಗೆಯಾ ॥ ೧

॥ ದ್ವಿಪದಿ ॥

ಪ್ರಥಿಪನ ಸುತೆಯ ಕಲ್ಯಾಣ ಮಂಟಪವಾ। ವತ್ತಿಯೊಳು ಸ್ವಾತಂತ್ರ ರಾಜ್ಯ ಕೆಲಸಗಳಾ ॥ ೧ ॥ ಸೆರೆ ಕ್ಲೃಪ್ತ ಸಮಯದೊಳಗೆಲ್ಲ ಮಡಗಿ ಮಡೂ। ಘಟಿಸೊಳಸುರಾವತಿಯು ಧಿಕ್ಕರಿಸಿ ಹಿರಿದಾ ॥ ೨ ॥ ರಘುವಿನ

ದೊಳಂದು ಕಲ್ಯಾಣ ಮಂಟಪದೀ ॥ ನಭಕಡರೆ ವಾದ್ಯರವ ಮಂಗ। ಳೋತ್ಸವದೀ ॥ ೩ ॥ ಅರಸು ಕುವರಿಯನು ಹರಿಹರ ನಾಯಕನಿಗೇ । ಗೌರಾಂಬೆಯನ್ನು ಯುವರಾಜ ಬುಕ್ಕನಿಗೇ ॥ ೪ ॥ ಬಲ್ಲಾಳ ರಾಯ ಕನ್ಯಾ ದಾನದಿಂದಾ । ಎಲ್ಲವರ ಮನ ತಣಿಸಿ ವೈವಾಹದಿಂದಾ ॥ ೫ ॥ ಜರಗಿದುದು ಉತ್ಸವವು ನವದಿವಸದನಕಾ ॥ ಮರುದಿವಸದುದಯದಲಿ ಪಟ್ಟಾಭಿಷೇಕಾ ॥ ೬ । ಕರ್ನಾಟಕ ಪ್ರತಿಷ್ಠಾಪನಾಚಾರ್ಯಾ । ಎನ್ನುತಲಿ ಪೊಗಳೆ ವಿದ್ಯಾರಣ್ಯ ಸ್ತುತಿಯಾ ॥ ೭ ॥

॥ ವಾರ್ಧಿಕ ॥

ಅರಸ ಕೇಳ್ ಶಾಲಿವಾಹನ ಶಕದ ಧಾತೃವ । ತ್ಸರದವರ ವೈಶಾಖ ಶುದ್ಧ ಸಪ್ತಮಿ ದಿನದಿ । ತರಣಿಯುದಯದ ಶುಭ ಮುಹೂರ್ತದೊಳು ಹರಿಹರಗೆ ಪಟ್ಟಾಭಿಷೇಕವೆಸಗೀ ॥ ಮೆರೆವ ಯುವರಾಜ ಪಟ್ಟವ ಬುಕ್ಕನಿಂ ಗಿತ್ತು । ಧರೆಯ ಸಜ್ಜನರುಲಿಯೆ ಸುರರು ಪೂಮಳೆ ಸುರಿಯೆ । ಪರಮ ಸುಜ್ಞಾನಿ ವಿದ್ಯಾರಣ್ಯರಮೃತ ಹಸ್ತದಿ ಹರಸೆ ನೃಪವರನನೂ ॥ ೧ ॥

ರಾ । ಮಧ್ಯಮಾವತಿ । ತ್ರಿವುಡೆ ।

ಬಂಧುಗಳೆ ಲಾಲಿಪುದು ನಾಡಿನ । ಹಿಂದು ಜನರ ಸ್ವತಂತ್ರ ರಾಷ್ಟ್ರವ। ಚಂದ್ರಪ್ರಭೆಯು ಜನಾಂಗ ಹೃದಯದ । ಮಂದಿರದಿ ನೆರೆ ಬೆಳಗಲೀ ॥ ಒಮ್ಮತದಲೀ ॥ ೧ ॥ ಧರ್ಮದ ಬುನಾದಿಯೊಳು ಸುಸ್ಥಿರ । ಪೆರ್ಮೆಯಿಂ ದೀ ರಾಜ್ಯದೊಳು ಹಿತ । ಧರ್ಮಚ್ಯುತಿಗೆಡೆಯಾಗದಂತೆ ಸ । ದ್ಧರ್ಮ ಶ್ರದ್ಧೆಯು ನೆಲಸಲೀ । ಪ್ರಜೆಗಳಲ್ಲೀ ॥ ೨ ॥ ನಿಜ ತಪೋ ಸಂಪತ್ತನರ್ಪಿಸಿ । ವಿಜಯ ವಿದ್ಯಾರಣ್ಯ ನಿರ್ಮಿತ । ವಿಜಯ ನಗರವಿದೆಂಬ ನಾಮವು । ತ್ರಿಜಗದೊಳು ಸ್ಥಿರವಾಗಲೀ ॥ ವಿಜಯಿಯಾಗೀ ॥ ೩ ॥ ಅನಕ ಭುವನೇಶ್ವರಿ ಕಟಾಕ್ಷದಿ । ಕನಕ ವೃಷ್ಟಿಯ ಸುರಿಸೆ ನಭದಿಂ । ದನಿಮಿಷರು ಜಯ ವೆಂದು ಸದ್ಗುರು । ವಿನಮಹಿಮೆಯನು ಪೊಗಳಿಯೇ । ಜಗವು ದಣಿಯೇ ॥ ೪ ॥ ಸ್ವಸ್ತಿಯಾಯ್ತು ಸ್ವರಾಜ್ಯದೊಳು ಸಂ । ಪತ್ತು ಮಿಗೆನಲಿದಾಡೆ ಕ್ಷೋಣಿಯೊಳು । ವೃತ್ತಕುಚದಬಲೆಯರು ಹರುಷದಿ । ಮುತ್ತಿನಾರತಿ ಬೆಳಗುತಾ ॥ ನರ್ತಿಸಿದರೂ ॥ ೫ ॥

॥ ಭಾಮಿನಿ ॥

ಅಸಮ ಬಲ ಯವನರ ವಿಘಾತದ । ಎಸುಗೆಯಿಂ ಹಿಂದುಗಳ ನುಳಿ

ಸಲು । ಪೊಸತು ಸಾಮ್ರಾಜ್ಯವನು ನಿರ್ಮಿಸಿದೀ ಮಹಾದ್ಭುತವಾ ॥ ವಸು
ಧೆಯೊಳು ಜನರೆಲ್ಲ ಪೊಗಳುತ । ಬಿಸಜನಾಭನ ಕೀರ್ತಿಸಲು ದಿಸೆ । ದಿಸೆಗ
ಳೆಲ್ಲ ಸುಭಿಕ್ಷ ವಸುಮತಿಗಾಯ್ತು ಮಂಗಲವೂ ॥ ೧ ॥

॥ ವಾರ್ದಿಕ ॥

ಸ್ವಸ್ತಿಶ್ರೀ ಕ್ರಿಸ್ತಶಕ ಸಹಸ್ರದೊಂಭೈನೂರು । ಮತ್ತೆಯರುವತ್ತನಾ
ಲ್ಕನೆ ವತ್ಸರವು ಮಾಸ । ಹತ್ತು ದಿನ ಶೋಡಷದೊಳುರೆ ಸೇರಿ ಬಂ
ವಿದ್ಯಾದಶಮಿಯಪರಾಹ್ನದಾ ॥ ಹೊತ್ತಿನೊಳು ಬರೆದಂತ್ಯಗೈದೆನೀ ಕಥನವಂ
ವಿಸ್ತರಿಸಿ ಯಕ್ಷಗಾನದೊಳಿಂತು ಚೇವಾರು । ಸತ್ಯವಾನಂ ತನ್ನ ಹೆತ್ತವರ
ಗುರುಜನರ, ಮಿತ್ರರಮಿತ ಕಟಾಕ್ಷದೀ ॥ ೧ ॥

ಭದ್ರಂ! ಶುಭಂ!! ಮಂಗಲಂ!!!

ಕಥಾ ಪರಿಚಯ

ಭಾರತದ ಉತ್ತರದಲ್ಲಿ ಪ್ರಬಲವಾಗಿದ್ದ ಇಸ್ಲಾಂ ಶಾಹಿಯು ಕ್ರಿ. ಶ. 1300ರ ಸುಮಾರಿಗೆ ಮೆಲ್ಲಮೆಲ್ಲನೆ ದಕ್ಷಿಣದತ್ತ ಹೆಜ್ಜೆ ಹಾ ತೊಡಗಿತು.

ದೈತ್ಯ ಧಾಳಿಗೆ ಇದಿರಾದ ಆನೆಗೊಂದಿಯು ಪತನಗೊಳಿಸಲ್ಪಟ್ಟು-ಹಿಂದೂ ಸುಮಂಗಲೆಯರ ಸಹಗಮನ-ರಾಜಕುಮಾರಿಯ ನಿರ್ಗಮನ ಇವುಗಳಲ್ಲಿ ಅವಸಾನ ಹೊಂದಿತು !

ಮಹಾತ್ಮರಾದ ಶ್ರೀ ವಿದ್ಯಾರಣ್ಯರ ದೈವಿಕ ಶಕ್ತಿ ನಿಸ್ಸಹಾಯಕರಾದ ಹರಿಹರ ಬುಕ್ಕರನ್ನು ಹಿಡಿದೆತ್ತಿತು ! . . . . . ಆಗ !

ಮಹಾತ್ಮರ ತಪಶ್ಶಕ್ತಿಯೇ ಹಿಂದೂ ಜನರ ಸಂಘಟನೆ !

ನಾಮಾವಶೇಷದ ದಾರಿ ಹಿಡಿದಿದ್ದ ಸನಾತನ ಧರ್ಮದ ನವಚೇತನ !

ಇವುಗಳ ಪಾವಿತ್ರ ಫಲವೇ,

‘ವಿಜಯನಗರದ ಸ್ಥಾಪನೆ’